


ಗೋವಿಂದರಾಜ ಬೂದಗುಂಪಾ ಸಾರಥ್ಯದಲ್ಲಿ

# GB NEWS ಕನ್ನಡ

SEARCHING OF TRUTH..........

ಸಂಪುಟ-01 ಸಂಚಿಕೆ-01 ಸಪ್ಟಬರ್ 30-2024 ಪುಟ-08 ಬೆಲೆ-10




## ಗಣಿ ಮಾಫಿಯಾದ ಜೊತೆ ಸೇರಿಕೊಂಡ

### ಕೊಪ್ಪಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ!!

## ಮಾನವೀಯತೆ ಇಲ್ಲದ ಕೊಪ್ಪಳ ಜಿಲ್ಲಾ ಆಡಳಿತ ; ಅಂಗವಿಕಲನ ಸಂಕಟ ಕಾಣುತ್ತಿಲ್ಲವೇ ಕೊಪ್ಪಳದ ರಾಜಕಾರಣಿಗಳೇ...




## ತುಂಗಾಭದ್ರ ಅಣೆಕಟ್ಟು ಹಾಗೂ ರೇಲ್ವೆ ನಿಲ್ದಾಣಗಳ ಸ್ಥಾಪನೆಯ ರೋಚಕ ಸಂಗತಿಗಳು



## ಕಳ್ಳ ಪತ್ರಕರ್ತರು ಮತ್ತು ಸಂಘಟಕರನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಿ






## ಮೆಡಿಕಲ್ ಶಾಪ್ ಲೈಸೆನ್ಸ್ ಪಡೆಯಲು ರೂ.50,000/- ಲಂಚ ಕೊಟ್ಟರೆ ಯಾವ ನಿಬಂಧನೆಗಳು ಬೇಡ ಸಲೀಸಾಗಿ ಸಿಗುತ್ತೆ ಪರವಾನಿಗೆ

# ಮಾನವೀಯತೆ ಇಲ್ಲದ ಕೊಪ್ಪಳ ಜಿಲ್ಲಾ ಆಡಳಿತ ;

## ಅಂಗವಿಕಲನ ಸಂಕಟ ಕಾಣುತ್ತಿಲ್ಲವೇ ಕೊಪ್ಪಳದ ರಾಜಕಾರಣಿಗಳೇ...



ಕೊಪ್ಪಳ ನಗರದಲ್ಲಿ ಮೊಣಕಾಲು ಮತ್ತು ಎರಡು ಕೈಗಳಿಂದ ಪ್ರಾಣಿಯಂತೆ ನಡೆ-ಯುತ್ತಿದ್ದ ಒಬ್ಬ ವ್ಯಕ್ತಿಯನ್ನು ಕಂಡ ತಕ್ಷಣ ಹೊಟ್ಟೆಯಲ್ಲಿ ಸಂಕಟದ ಅನುಭವ ಆಯ್ತು, ಆ ವ್ಯಕ್ತಿಯನ್ನು ನಾನು ವಿಶೇಷ ಕಾಳಜಿಯೊಂದಿಗೆ ವಿಚಾರಿಸಿದಾಗ "ನಿಮಗೆ ಸರ್ಕಾರ ತ್ರಿಚಕ್ರ ವಾಹನ ನೀಡುತ್ತೆ ನೀವು ಅದನ್ನು ಪಡೆದುಕೊಳ್ಳಬೇಕು ತಾನೆ" ಎಂದು ಕೇಳಿದೆ, ಆದರೆ ವೆಂಕಟೇಶ ಶಿರೋಳ ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲಾ ಗುನ್ನಳ್ಳಿ ಗ್ರಾಮದ ವ್ಯಕ್ತಿ ಎಂದು ಹೇಳಿಕೊಂಡ ಆತ "ನಾನು ಐದು ವರ್ಷಗಳಿಂದ ಪ್ರತಿದಿನ ಕೊಪ್ಪಳದಲ್ಲಿ ಎಷ್ಟು ಕಚೇರಿಗಳಿವೆ ಎಲ್ಲಾ ಕಚೇರಿಗಳನ್ನು ತಿರುಗಾಡುತ್ತಿದ್ದೇನೆ ಸರ್ ಯಾರು ಕೂಡ ಕಿವಿಗೆ ಹಾಕಿಕೊಳ್ಳುತ್ತಿಲ್ಲ, ತ್ರಿಚಕ್ರ ವಾಹನಗಳನ್ನು ಹಂಚುವಾಗ ಚೀಟಿ ಎತ್ತುತ್ತಾರೆ, ನಮ್ಮ ಹೆಸರು ಬರುವುದಿಲ್ಲ! ಮುಂದೆ ನೋಡೋಣ ಹೋಗು ಅಂದು ಕಳಿಸುತ್ತಾರೆ, ನಾನು ಹೇಗೆ ಬದುಕಬೇಕು ಅನ್ನುವುದೇ ನನಗೆ ಗೊತ್ತಾಗುತ್ತಿಲ್ಲ. ಸರಿಯಾಗಿ ಓಡಾಡಿದ್ದರೆ ನನ್ನ ಕುಟುಂಬವನ್ನು ಸಂತೋಷವಾಗಿ ನೋಡಿಕೊಳ್ಳಬಹುದಾಗಿತ್ತು, ಆದರೆ ನನ್ನ ಈ ಪರಿಸ್ಥಿತಿಯಿಂದ ಸಾಕಷ್ಟು ಓಡಾಡಲು ಕಷ್ಟವಾಗುತ್ತದೆ ಆದ್ದರಿಂದ ಕೆಲಸ ಮಾಡಲು ಸಮಯ ಸಾಕಾಗೋದಿಲ್ಲ ನಮ್ಮಂತ ಬಡವರನ್ನು ಯಾರು ನೋಡುವುದಿಲ್ಲ ಸರ್, ಎಲ್ಲ ರಾಜಕಾರಣಿಗಳ ಮನೆಗೂ ಹೋದೆ ಪ್ರಯೋಜನ ಆಗ್ಲಿಲ್ಲ ಸರ್. ದಯವಿಟ್ಟು ನೀವೇ ಏನಾದರೂ ಮಾಡಿ ಅಂತ ಕಣ್ಣೀರು ಹಾಕಿದ".


**ಮಾನವೀಯತೆ ಇಲ್ಲದ ಕೊಪ್ಪಳ ಜಿಲ್ಲಾ ಆಡಳಿತ:**

ಐದು ವರ್ಷಗಳ ಕಾಲ ಸತತವಾಗಿ ಕಚೇರಿಗಳಿಗೆ ತಿರುಗಿದರು ಕೂಡ ಈ ವ್ಯಕ್ತಿಯನ್ನು ಜಿಲ್ಲಾ ಆಡಳಿತ ಕಷ್ಟದಿಂದ ಹೊರತಂದಿಲ್ಲ, ಸರ್ಕಾರಿ ಆಡಳಿತ ಯಂತ್ರ ಇಂತಹ ವ್ಯಕ್ತಿಗಳಿಗಂತಾನೆ ತ್ರಿಚಕ್ರ ವಾಹನದ ಯೋಜನೆ ಮಾಡಿದೆ, ಆದ-ರೆ ಅಂತಹ ವ್ಯಕ್ತಿಗೆ ಅದು ಮುಟ್ಟಿಲ್ಲ ಅಂದರೆ ಇದು ಕೊಪ್ಪಳ ಜಿಲ್ಲಾ ಆಡಳಿತದ ವೈಫಲ್ಯ ಅನ್ನುವುದು ಎದ್ದು ಕಾಣುತ್ತದೆ. ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಈತನ ಕಷ್ಟದ ಸಂಕಟವನ್ನು ನೀಗಿಸಬೇಕು ನಮ್ಮಲ್ಲೂ ಹೃದಯ ಇದೆ ಎಂದು ಅಧಿಕಾರಿಗಳು ಸಾಬೀತು ಮಾಡಿಕೊಳ್ಳಬೇಕು. ಇಲ್ಲದಿದ್ದರೆ "ಹೃದಯ ಹೀನ ಅಧಿಕಾರಿಗಳು ಕೊಪ್ಪಳದಲ್ಲಿ ಇದ್ದಾರೆ" ಅಂತ ತಮ್ಮ ಕೆಲಸಗಳು ಆಗುತ್ತವೆ ಅಂತ ಜಿಲ್ಲಾ ಆಡಳಿತ ಕಚೇರಿಗೆ ಬರುವ ಜನ ನಿಟ್ಟಿಸಿರು ಬಿಡುತ್ತಾ ಮನೆಯಲ್ಲಾದರೂ ಇರುತ್ತಾರೆ.

**ಜನಪ್ರಿಯ ಶಾಸಕರು ಜನಪ್ರಿಯ ಸಂಸದರು ಜನಪ್ರಿಯ ರಾಜಕೀಯ ನಾಯಕರಗಳು ತುಂಬಿರುವ ಕೊಪ್ಪಳದಲ್ಲಿ ಈ ವ್ಯಕ್ತಿಯ ಸಂಕಟ ಎಲ್ಲಿ ಮರೆಯಾಯಿತು:**

ಕೊಪ್ಪಳದ ಶಾಸಕರು ಮತ್ತು ಸಂಸದರು ಸಾಕಷ್ಟು ಜನಪ್ರಿಯ ಕೆಲಸಗಳನ್ನು ಮಾಡಿದ್ದಾರೆ ಅಂತ ಸಾಕಷ್ಟು ವರದಿಗಳು ನಾವು ದಿನಾಲು ನೋಡುತ್ತೇವೆ. ಆದರೆ ಇಂತಹ ಸಾಮಾನ್ಯ ಅಂಗವಿಕಲನ ಕಷ್ಟ ಮತ್ತು ಸಂಕಟ ಕೊಪ್ಪಳದ ಜನಪ್ರತಿನಿಧಿಗಳಿಗೆ ಯಾಕೆ? ಕಾಣಲಿಲ್ಲ.

ಎಲ್ಲಾದನ್ನು ಸುದ್ದಿ ಬಿತ್ತರದ ಮುಖಾಂತರವೇ ನೋಡ ಬಯಸಬೇಕೆಂದರೆ ಹೇಗೆ? ಇಂತಹ ವ್ಯಕ್ತಿಗಳನ್ನು ಗುರುತಿಸಿ ಸರ್ಕಾರ ಮಾಡಿರುವ ಸಾಕಷ್ಟು ಯೋಜನೆಗಳನ್ನು ಸಾರ್ಥಕ ರೀತಿಯಲ್ಲಿ ಬಳಸುವುದು ದೇವರಿಗೆ ಪೂಜೆ ಮಾಡಿದಷ್ಟೇ ಮತ್ತು ದೇವರನ್ನು ಪಡೆದುಕೊಂಡಷ್ಟೇ ಪುಣ್ಯ ಬರುತ್ತದೆ ಅನ್ನುವ ಸಾಮಾನ್ಯ ಜ್ಞಾನವಾದರೂ ಇಲ್ಲಿಯ ಜನಪ್ರತಿನಿಧಿಗಳಿಗೆ ಇದ್ದಿದ್ದರೆ ಇಂತಹ ವ್ಯಕ್ತಿ ಈ ರೀತಿ ಸಂಕಟ ಪಡುತ್ತಿರಲಿಲ್ಲ. ಈ ಪತ್ರಿಕೆ ಪ್ರಕಟಣೆಯ ಮುಖಾಂತರ ಕೊಪ್ಪಳದ ಜಿಲ್ಲಾ ಆಡಳಿತ ಮತ್ತು ಜನಪ್ರತಿನಿಧಿಗಳಿಗೆ ಹೇಳ ಬಯಸುತ್ತೇವೆ "ಕೂಡಲೇ ನಿಮ್ಮ ಕೆಲಸ ಪ್ರಾಮಾಣಿಕವಾಗಿ ಈ ವ್ಯಕ್ತಿಯ ಸಂಕಟವನ್ನು ನೀಗಿಸಲು ಪ್ರಯತ್ನಿಸಿ ಇಲ್ಲದಿದ್ದರೆ ಮನೆಗೆ ಹೋಗಿ".










ಜಿಬಿ ನ್ಯೂಸ್ ಕನ್ನಡ ಡಿಜಿಟಲ್ ವಾರಪತ್ರಿಕೆ ಸೆಪ್ಟೆಂಬರ್ 30-2024 



ಗೋವಿಂದರಾಜ ಬೂದಗುಂಪಾ
ಸಂಪಾದಕರು

ಜಿಬಿ ನ್ಯೂಸ್ ಕನ್ನಡ ಡಿಜಿಟಲ್ ವಾರಪತ್ರಿಕೆ

# 351ನೇ ವಿಧಿಯೆಂಬ ಹಲ್ಲು ಕೀಳದ ಹೊರತು, ಹಿಂದಿ ಹೇರಿಕೆಯೆಂಬ ಹಾವು ಬುಸುಗುಡುವುದು ನಿಲ್ಲಿಸದು!


## ಸಂಪಾದಕಿಯ..




ನಾವೀಗ ಕೂಗಬೇಕಾದದ್ದು "ಹಿಂದಿ ಹೇರಿಕೆ ನಿಲ್ಲಿಸಿ" ಎಂಬ ಸೀಮಿತ ಆಶಯದ ಘೋಷಣೆಯನ್ನಲ್ಲ, ಬದಲಿಗೆ ಹಿಂದಿಯನ್ನು ಹೇರುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವ "ಸಂವಿಧಾನದ 351ನೇ ವಿಧಿಯನ್ನು ರದ್ದುಗೊಳಿಸಿ" ಎಂಬ ಮಹಾತ್ವಾಕಾಂಕ್ಷೆಯ ಒಕ್ಕೊರಲ ಆರ್ಭಟವನ್ನು. ಆದರೆ ಇವತ್ತು ಕೇವಲ ಜನಾಭಿಪ್ರಾಯದಿಂದ ಯಾವ ಬದಲಾವಣೆಯೂ ಸಾಧ್ಯವಾಗದಷ್ಟು ನಮ್ಮ ಸರ್ಕಾರಗಳ ಚರ್ಮ ದಪ್ಪಗಾಗಿದೆ, ರಾಜಕೀಯ ಶಕ್ತಿ ಮಾತ್ರ ನಮ್ಮ ಧ್ವನಿಯನ್ನು ಕಾಯ್ದೆಯಾಗಿಸಬಲ್ಲದು. ನಮಗೆ ಮಲೆನಾಡಿಗರಿಗೆ ಹಾವುಗಳ ಉಪಟಳ ಹೆಚ್ಚು. ನಾಗರದಂತಹ ವಿಷಪೂರಿತ ಹಾವುಗಳು ಮನೆಯೊಳಗೆ ಬಂದರೆ ಭೀತಿಯಾಗುವುದು ಸಹಜ. ಆಗೆಲ್ಲ ಪಾತ್ರೆ, ಪಡಗಗಳನ್ನು ನೆಲದ ಮೇಲೆ ಹಾಕಿ ಗದ್ದಲವೆಬ್ಬಿಸಿ ಓಡಿಸಿಬಿಡುತ್ತೇವೆ. ಆದರೆ ವಿಷದ ಹಲ್ಲಿಲ್ಲದ ಕೆರೆಹಾವುಗಳಂಥವು ಮನೆಯೊಳಗೆ ಇಣಕಿ ಹಾಕಿ, ಅಟ್ಟದ ಮೇಲೆಯೇ ಓಡಾಡಿಕೊಂಡಿದ್ದರೂ ಕ್ಯಾರೇ ಅನ್ನದೆ ನಿರಾಳವಾಗಿರುತ್ತೇವೆ.

ಹಿಂದಿ ಹೇರಿಕೆಯೆಂಬುದು ಪ್ರಾದೇಶಿಕ ಭಾಷಿಕರ ಮೇಲೆ (ವಿಶೇಷವಾಗಿ ದಾಕ್ಷಿಣಾತ್ಯರ ಮೇಲೆ) ಮತ್ತೆ ಮತ್ತೆ ಬುಸುಗುಡುವ ಹಾವಾದರೆ, ಸಂವಿಧಾನದ 351ನೇ ವಿಧಿ ಆ ಹಾವಿಗೆ ಧೈರ್ಯ ತುಂಬುವ ಹಲ್ಲು. ಹಿಂದಿ ದಿವಸ, ತ್ರಿಭಾಷಾ ಸೂತ್ರ, ಸರ್ಕಾರಿ ಸೇವೆಗಳಲ್ಲಿ ಕನ್ನಡದ ಕಡೆಗಣನೆ, ಹೀಗೆ ಹತ್ತಾರು ಬಿಲಗಳ ಮೂಲಕ ನಮ್ಮ ಮನೆಯನ್ನು ಹೊಗುವ ಈ ಹಾವು ಸಮಯ ಸಿಕ್ಕಾಗಲೆಲ್ಲ ನಮ್ಮ ಮೇಲೆ ವಿಷಕಾರುತ್ತಲೇ ಇರುತ್ತದೆ. ನಾವು ಕೂಡಾ 'ಹಿಂದಿ ಹೇರಿಕೆ ನಿಲ್ಲಿಸಿ' ಎಂದು ಕೆಲವು ದಿನ ಘೋಷಣೆ ಕೂಗಿ, ಪ್ರತಿಭಟನೆ ಮಾಡಿ ಗದ್ದಲ ಎಬ್ಬಿಸಿ ಹಾವನ್ನು ಓಡಿಸಿದೆವೆಂದು ಸುಮ್ಮನಾಗಿಬಿಡುತ್ತೇವೆ. ಮತ್ತೆ ಮರುವರ್ಷ ಸೆಪ್ಟೆಂಬರ್ ಬಂದರೆ, ಅದೇ ರಾಗ, ಅದೇ ಹಾಡು: "ಒಂದು ದೇಶ – ಒಂದು ಭಾಷೆ" ಎಂಬ ಹೊಸ ಪೊರೆ ಸುತ್ತಿಕೊಂಡ ಹಾವು ಧುತ್ತೆಂದು ಪ್ರತ್ಯಕ್ಷವಾಗುತ್ತದೆ, ನಮ್ಮದು ಯಥಾಪ್ರಕಾರ ಮತ್ತದೇ ಸದ್ದುಗದ್ದಲ. ಈ ಸಮಸ್ಯೆಗೊಂದು ಶಾಶ್ವತ ಪರಿಹಾರ ಬೇಕಿದ್ದರೆ, ನಾವು ಮಾಡಬೇಕಾದದ್ದು ಗದ್ದಲವನ್ನಲ್ಲ; ಬದಲಿಗೆ ಸದ್ದಿಲ್ಲದೆ ಹಾವಿನ ಹೆಡೆಯನ್ನು ಮೆಟ್ಟಿಹಿಡಿದು, ಅದು ಮತ್ತೆಂದೂ ವಿಷವನ್ನು ಕಕ್ಕದಂತೆ ಸಂವಿಧಾನದ 351ನೇ ವಿಧಿ ಎಂಬ ಅದರ ಹಲ್ಲನ್ನು




# ಬೂದಗುಂಪಾದಲ್ಲಿ ದಲಿತರ ಸ್ಮಶಾನ ಅಕ್ರಮ ಒತ್ತುವರಿ;

## ಸಂಘರ್ಷಕ್ಕೂ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಿ



ಕೊಪ್ಪಳ ತಾಲೂಕಿನ ಬೂದಗುಂಪ ಗ್ರಾಮದಲ್ಲಿ ದಲಿತರ ಸಮಾಸಾನವನ್ನು ಪಕ್ಕದ ಜಮೀನಿನವರು ಒತ್ತುವರಿ ಮಾಡುತ್ತಿದ್ದಾರೆ ಎಂದು ದಲಿತ ಮುಖಂಡ ಪಕೀರಪ್ಪ ದೊಡ್ಡಮನಿ ಆರೋಪಿಸಿದ್ದಾರೆ.

ಶತಮಾನಗಳಿಂದಲೂ ದಲಿತರು ಸಮುದಾಯದ ಶವಗಳನ್ನು ಊಳಲು ಪ್ರತ್ಯೇಕ ಸ್ಮಶಾನವನ್ನು ಸರ್ಕಾರದಿಂದ ಸರ್ವೆ ನಂಬರ್ 27ರಲ್ಲಿ 1 ಎಕ್ಕ-ರೆ 33 ಗುಂಟೆ ಜಾಗವನ್ನು ಪಡೆದುಕೊಂಡಿದ್ದಾರೆ, ಅಕ್ರಮ ಒತ್ತುವರಿಯ ಪರಿಣಾಮವಾಗಿ ಅರ-ರ್ಧ ಎಕರೆ ಕೂಡ ದಲಿತರಿಗೆ ಸ್ಮಶಾನ ಉಳಿದಿಲ್ಲ. ಸಂಬಂಧಿಸಿದ ಅಧಿಕಾರಿಗಳಿಗೆ ದಲಿತ ಸಂಘಟನೆಗಳು 2018 ರಿಂದ ಮನವಿ ಮಾಡಿಕೊಂಡು ಬಂದಿದ್ದರು ಕೂಡ ಇದುವರೆಗೂ ಯಾವ ಅಧಿಕಾರಿಗಳು ಜಾಗಕ್ಕೆ ಭೇಟಿ ನೀಡಿಲ್ಲ ಮತ್ತು ದಲಿತರಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ಕೆಲಸ ಮಾಡಿಲ್ಲ ಇದರ ಪರಿಣಾಮವಾಗಿ ಇಡೀ ಸ್ಮಶಾನವನ್ನೇ ಅಕ್ರಮವಾಗಿ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ,


ಕೋಟ್: "ನಮ್ಮ ಸಮುದಾಯದ ಸ್ಮಶಾನರ ಜಾಗವನ್ನು ಸಂಪೂರ್ಣ ಒತ್ತುವರಿ ಮಾಡಿಕೊಳ್ಳುತ್ತಿದ್ದಾರೆ, ನಮ್ಮ ಸಮುದಾಯದಲ್ಲಿ ಯಾರಾದರೂ ಮರಣ ಹೊಂದಿದರೆ ಅವರನ್ನು ಊಳಲು ನಮಗೆ ಜಾಗವಿಲ್ಲ ನಮ್ಮ ಮನೆಯ ಮುಂದೆ ಊಳಬೇಕು ಇಲ್ಲದಿದ್ದರೆ ಗ್ರಾಮ ಪಂಚಾಯಿತಿಯ ಮುಂದೆ ಊಳಬೇಕು ಅಂತಹ ಪರಿಸ್ಥಿತಿ ನಮಗೆ ಬಂದೊದಗಿದೆ ಕೂಡಲೇ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಗ್ರಾಮ ಪಂಚಾಯತ್ ಮತ್ತು ಸರ್ಕಾರಿ ಕಟ್ಟಡಗಳ ಮುಂದೆ ನಮ್ಮ ಸಮುದಾಯದ ಶವಗಳನ್ನು ಊಳಬೇಕಾಗುತ್ತದೆ"

ಫಕೀರಪ್ಪ ಹರಿಜನ ಡಿಎಸ್ಎಸ್ ಮುಖಂಡರ ಬೂದಗುಂಪಾ

ಈ ಸಂಗತಿ ತುಂಬಾ ಸೂಕ್ಷ್ಮ ವಿಷಯವಾಗಿ ಮಾರ್ಪಾಡಾಗುತ್ತಿದೆ ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಕ್ರಮ ಕೈಗೊಳ್ಳದೆ ಹೋದರೆ ಬೂದಗುಂಪ ಗ್ರಾಮದಲ್ಲಿ ಸಂಘರ್ಷ ಉಂಟಾಗುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ ಒಂದು ವೇಳೆ ಬೂದಗುಂಪಾದಲ್ಲಿ ಈ ರೀತಿಯ ವಾತಾವರಣ ನಿರ್ಮಾಣವಾದರೆ ಅದಕ್ಕೆ ಅಧಿಕಾರಿಗಳೇ ಜವಾಬ್ದಾರಿ ಆಗುತ್ತಾರೆ ಎಂದು ದಲಿತ ಸಂಘರ್ಷ ಸಮಿತಿಯ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಈ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಬೂದಗುಂಪ ಗ್ರಾಮಕ್ಕೆ ಆಗಮಿಸಿ ದಲಿತ ಜನಾಂಗಕ್ಕೆ ಮೀಸಲಾಗಿರುವ ಸ್ಮಶಾನವನ್ನು ಒತ್ತುವರಿ ಮಾಡಿಕೊಂಡವರಿಂದ ಬಿಡಿಸಿಕೊಡಬೇಕು ಗ್ರಾಮದೊಳಗೆ ಸಂಘರ್ಷ ಆಗುವುದನ್ನು ತಪ್ಪಿಸಬೇಕು ಅನ್ನುವದು ದಲಿತ ಜನಾಂಗದ ಒತ್ತಾಯ

# ಕಳ್ಳ ಪತ್ರಕರ್ತರು ಮತ್ತು ಸಂಘಟಕರನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಿ




ಇತ್ತೀಚೆಗೆ ಕೊಪ್ಪಳ ಜಿಲ್ಲೆಯಲ್ಲಿ ಕನ್ನಡಪರ ಸಂಘಟನೆಗಳು ಮತ್ತು ಪತ್ರಕರ್ತರು ಅಂತ ಹೇಳಿಕೊಂಡು ಕೆಲವು ಜನ ವಸೂಲೆಗೆ ಇಳಿದಿರುವುದು ದುರದೃಷ್ಟಕರ ಸಂಗತಿ ಮತ್ತು ಸಮಾಜಕ್ಕೆ ಮಾರಕವಾದ ಅಂಶವಾಗಿದೆ. ಇಂಥವರಿಂದ ನಿಜವಾದ ಪ್ರಾಮಾಣಿಕವಾದ ಕನ್ನಡಪರ ಮತ್ತು ಸಾಮಾಜಿಕ ಪರ ಹೋರಾಟಗಾರರಿಗೂ ಮತ್ತು ಪ್ರಾಮಾಣಿಕ ಪತ್ರಕರ್ತರಿಗೂ ಮಸಿಬಳಿದಂತಾಗುತ್ತಿದೆ ಮತ್ತು ಇಂತಹ ಕಾರ್ಯಚಟುವಟಿಕೆಯಿಂದ ಪತ್ರಿಕೋದ್ಯಮ ಮತ್ತು ಸಂಘಟನೆಗಳಿಗೆ ಬೆಲೆ ಇಲ್ಲದಂತಾಗುತ್ತಿದೆ. ಸಮಾಜದಲ್ಲಿರುವ ಹುಳುಕುಗಳನ್ನು ಮತ್ತು ಅದರ ವಿರುದ್ಧ ಹೋರಾಟ ಮಾಡಬೇಕಾದ ಸಂಘಟನೆಗಳು ಮತ್ತು ಪತ್ರಕರ್ತರು ಕೆಲವು ಜನ ಮಾತ್ರ ಇಂಥ ಹೇಯ ಕೃತ್ಯಕ್ಕೆ ಇಳಿದು ಹೇಸಿಗೆ ತಿನ್ನುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ರೀತಿಯ ಒಳ್ಳೆಯ ಸೈದ್ಧಾಂತಿಕ ಹಿನ್ನೆಲೆಯನ್ನು ಇಟ್ಟುಕೊಳ್ಳದೆ ನಾವು ಪತ್ರಕರ್ತರು ನಾವು ಹೋರಾಟಗಾರರು ನಮಗೆ ತಿಂಗಳಿಗೆ ಇಷ್ಟು ಮುಟ್ಟಿಸಬೇಕು ಇಲ್ಲದಿದ್ದರೆ ನಿಮ್ಮ ಮೇಲೆ ಕೇಸ್ ಮಾಡಲಾಗುತ್ತದೆ ಪೋಲಿಸರಿಗೆ ಫೋನ್ ಹಚ್ಚಿ ಕರೆಸಬೇಕಾಗುತ್ತದೆ ಎಂದು ಧಮ್ಕಿ ಹಾಕುತ್ತಿರುವುದು ಬೆಳಕಿಗೆ ಬಂದಿವೆ. ಆದ-ರೆ ಇದುವರೆಗೂ ಕೂಡ ಅವು ಪೊಲೀಸ್ ಮೆಟ್ಟಿಲು ಹತ್ತದೆ ಇರುವುದು ದುರಾದೃಷ್ಟಕರ, ಜನಸಾಮಾನ್ಯರ ಮೇಲೆ ನಿರಂತರ ದಬ್ಬಾಳಿಕೆ ಮಾಡುವುದು ಇಂತಹ ವ್ಯಕ್ತಿಗಳ ಕೆಲಸವಾಗಿದೆ ಇದರಿಂದ ಪ್ರಾಮಾಣಿಕ ಸಂಘಟಕರು ಮತ್ತು ಪತ್ರಕರ್ತರಿಗೆ ಮಸಿ ಬಳಿಯುತ್ತಾ ತಿರುಗುತ್ತಿರುವ ಇಂಥಾ ಅವಿವೇಕಿಗಳನ್ನು ಸ್ವತಃ ಪ್ರಾಮಾಣಿಕ ಪತ್ರಕರ್ತರು ಮತ್ತು ಸಂಘಟನೆಗಳೇ ಮಟ್ಟ ಹಾಕಬೇಕಾದ ಪರಿಸ್ಥಿತಿ ಉಂಟಾಗಿದೆ. ಇಂಥವರು ರೋಡ್ ರೋಡ್ ಗಳಲ್ಲಿ ಸರ್ಕಲ್ ಗಳಲ್ಲಿ ಕಲ್ಲು ಕ್ವಾರಿಗಳಲ್ಲಿ ಕೋಳಿ ಫಾರಂಗಳಲ್ಲಿ ಬ್ರಾಂಡಿ ಶಾಪ್ ಗಳಲ್ಲಿ ಪ್ರತಿನಿತ್ಯ ದೌರ್ಜನ್ಯ ಮಾಡುತ್ತಿರುವುದು ಕಂಡುಬರುತ್ತಿದೆ. ಇವರಿಗೆ ಯಾವುದೇ ರೀತಿಯ ಉದ್ಯೋಗಗಳು ಕೂಡ ಇಲ್ಲ ಇದನ್ನೇ ತಮ್ಮ ಉದ್ಯೋಗ ಮಾಡಿಕೊಂಡಿದ್ದಾರೆ ಸಂಘಟನೆ ಮತ್ತು ಪತ್ರಕರ್ತ ಅನ್ನುವ ಹೆಸರುಗಳನ್ನೇ ಬಂಡವಾಳ ಮಾಡಿಕೊಂಡು ಎತ್ತುವಳಿ ಮಾಡುತ್ತಾ ತಿರುಗುತ್ತಿದ್ದಾರೆ ಇಂಥವರಿಂದ ಸಮಾಜಕ್ಕೆ ತುಂಬ ಮಾರಕವಾಗಿದೆ. ಕಾರಣ ಕೂಡಲೇ ಇಂಥವರನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇನ್ನೊ ಮುಂದುವರೆದು ಇವರು ಅಧಿಕಾರಿಗಳಂತೆ ವರ್ತನೆ ಮಾಡುತ್ತಿರುವುದು ಕೂಡ ಕಂಡುಬರುತ್ತಿದೆ ಅಧಿಕಾರಿಗಳು ಮಾಡಬೇಕಾದಂಥ ಕೆಲಸವನ್ನು ಇವರು ಮಾಡುತ್ತಿರುವುದು ಯಾವ ಕಡೆಯಿಂದ ಇವರಿಗೆ ಇಂತಹ ಅಧಿಕಾರ ಸಿಕ್ಕಿತು ಅನ್ನುವ ಅನುಮಾನ ಹುಟ್ಟು ಹಾಕುತ್ತಿದೆ, ಇವರು ಯಾವ ರೀತಿ ಕಾರ್ಯಾಚರಣೆಗೆ ಇಳಿಯುತ್ತಾರೆ ಅಂದರೆ ಯಾವುದೇ ಟ್ರಕ್ ಗಳಲ್ಲಿ ಲೋಡ್ ಬಂದರೆ ಅದು ಯಾವುದೇ ಇರಲಿ ಅದರ ಪರ್ಮಿಟ್ ಗಳನ್ನು ಚೆಕ್ ಮಾಡುತ್ತಾರೆ ಮತ್ತು ಡ್ರೈವರ್ ಗಳಿಗೆ ಬೆದರಿಕೆ ಹಾಕುತ್ತಾರೆ. ಸಂಬಂಧಿಸಿದ ಮಾಲೀಕರಿಗೆ



ಫೋನ್ ಮಾಡಿ ನೀವು ಇಷ್ಟು ದುಡ್ಡು ಕೊಡದಿದ್ದರೆ ಪೊಲೀಸರಿಗೆ ದೂರುಕೊಡಬೇಕಾಗುತ್ತದೆ ಎಂದು ಬೆದರಿಕೆ ಹಾಕುತ್ತಾರೆ ಆದರೆ ಇಂತಹ ಯಾವುದೇ ಜ್ಞಾನ ಇಲ್ಲದ ಲಾರಿ ಮಾಲೀಕರು ಇವರಿಗೆ ಹೆದರಿ ದುಡ್ಡು ಕೊಡುವಂತಹ ಪರಿಸ್ಥಿತಿಗೆ ಬಂದು ಬಿಡುತ್ತಾರೆ. ಇದೇ ರೀತಿ ಗಂಗಾವತಿಯಲ್ಲಿ ಮೊನ್ನೆ ತಾನೇ 1ಪ್ರಕರಣ ಕೂಡ ನಡೆದಿದೆ ಆ ರೀತಿ ಮಾಡುತ್ತಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿ ಪ್ರಕರಣ ಕೂಡ ದಾಖಲಿಸಿದ್ದಾರೆ ಇಂತಹ ವ್ಯಕ್ತಿಗಳು ಕೊಪ್ಪಳದಲ್ಲೂ ಕೂಡ ಇದ್ದಾ-ರೆ ಮತ್ತು ಕೊಪ್ಪಳ ಜಿಲ್ಲೆಯಲ್ಲೂ ಕೂಡ ಇದ್ದಾರೆ ಕೂಡಲೇ ಇಂಥವರನ್ನು ಗುರುತಿಸಿ ಇವರ ಮೇಲೆ ಶಿಸ್ತು ಕ್ರಮವನ್ನು ಪೊಲೀಸ್ ಇಲಾಖೆ ತೆಗೆದುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಸಮಾಜಮುಖಿಯಾದ ಪತ್ರಕರ್ತರು ಮತ್ತು ಸಂಘಟನೆಗಳಿಗೆ ಇವರು ಮಸಿ ಬಳಿಯುವ ಕೆಲಸ ಮಾಡುತ್ತಾರೆ ಇವರಿಂದ ಸಂಘಟನೆಗಳು ಪತ್ರಕರ್ತರು ಅವಮಾನ ಅನುಭವಿಸಬೇಕಾದಂತ ಪರಿಸ್ಥಿತಿ ಎದುರಾಗಿದೆ. ಮುಂದೆ ಇವರು ಸಮಾಜಕ್ಕೆ ಮಾರಕವಾಗಿ ಬೆಳೆಯುತ್ತಾರೆ ಮತ್ತು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುತ್ತಾರೆ ಕಾನೂನುಬಾಹಿರ ಚಟುವಟಿಕೆಗಳನ್ನು ಮಾಡುತ್ತಾ ನಿತ್ಯ ನಿರಂತರ ದೌರ್ಜನ್ಯಗಳನ್ನ ಮಾಡುತ್ತಾ ಸಮಯ ಕಳೆಯುತ್ತಿರುವ ಇಂತಹ ವ್ಯಕ್ತಿಗಳಿಗೆ ಜೈಲೂಟ ಮಾಡಿಸಿದರೆ ಮಾತ್ರ ಇವರು ಸರಿದಾರಿಗೆ ಬರಬಹುದು.

# ಮೆಡಿಕಲ್ ಶಾಪ್ ಲೈಸೆನ್ಸ್ ಪಡೆಯಲು ರೂ.50,000/- ಲಂಚ

## ಕೊಟ್ಟರೆ ಯಾವ ನಿಬಂಧನೆಗಳು ಬೇಡ ಸಲೀಸಾಗಿ ಸಿಗುತ್ತೆ ಪರವಾನಿಗೆ

ಮೆಡಿಕಲ್ ಸ್ಟೋರ್ಸ್ ಅಥವಾ ಮೆಡಿಕಲ್ ಹೋಲ್ ಸೇಲ್ ಆರಂಭಿಸಲು, ಬೇಕಾದ ಔಷಧ ಮಾರಾಟ ಪರವಾನಿಗೆ ಪಡೆಯಲು, ಈಗ ರೂ.50 ಸಾವಿರ ಲಂಚ ಪಾವತಿಸಬೇಕಾದ ಅನಿವಾರ್ಯತೆ ಉಂಟಾಗಿದೆ.

ರೂ.20,000/– ಕ್ಕೆ ಮಾತ್ರ ಸಿಮೀತವಾಗಿದ್ದ ಈ ಲಂಚದ ಹಣ 75% ಹೆಚ್ಚಾಗಿದ್ದರಿಂದ ಹೊಸ ಪರವಾನಿಗೆ ಪಡೆಯುವವರು ಗೋಳಾಡುತ್ತಿದ್ದಾರೆ.ರೂ.50 ಸಾವಿರ ಲಂಚ ಪಾವತಿಸಿದರೆ,ಯಾವ ಕಟ್ಟಳೆಗಳು ಇಲ್ಲದೆ ಆಯಾ ವೃತ್ತದ ಸಹಾಯಕ ಔಷಧ ನಿಯಂತ್ರಕರು ದಿಢೀರ್ ಆಗಿ ಲೈಸೆನ್ಸ್ ಕೊಡುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ.

ರೂ.50 ಸಾವಿರ ಪಾವತಿಸುವ ಜೊತೆಗೆ ಅಧಿಕಾರಿಗಳ ಟ್ಯಾಕ್ಸಿ ಬಾಡಿಗೆಯನ್ನು ಸಹ ಅರ್ಜಿದಾರರು ಪಾವತಿಸಬೇಕು.ಲೋಕಾಯುಕ್ತ ಅಧಿಕಾರಿಗಳಿಂದ ಟ್ರ್ಯಾಪ್ ಆದ ಅಧಿಕಾರಿಗಳಿಂದಲೇ ಈ ದರ ಜಾಸ್ತಿಯಾಗಿರುವುದು.

ನೌಕರಿಯಿಂದ ವಜಾ ಮಾಡಲು ಉಪ ಲೋಕಾಯುಕ್ತದಿಂದ ಸರಕಾರಕ್ಕೆ ಶಿಫಾರಸ್ಸು ಆದ ಅಧಿಕಾರಿಗಳಿಂದಲೇ ಈ ದಂದ- ನಡೆದಿದೆ.ಹೇಗೂ ನೌಕರಿ ಹೋಗುತ್ತದೆ.ಹೇಗಾದರೂ ಮಾಡಿ,ಹಣ ಬಳಿದುಕೊಂಡು ಮನೆಗೆ ಹೋಗಬೇಕು ಎಂದು ಇಂತಹ ಅಧಿಕಾರಿಗಳು ಮಾನಸಿಕವಾಗಿ ಸಿದ್ದರಾಗಿ ಬಿಟ್ಟಿದ್ದಾರೆ.

ನೌಕರಿಯಿಂದ ವಜಾಗೊಳಿಸಲು,ಲೋಕಾಯುಕ್ತರು ಆದೇಶಿಸಿದ ನಂತರವೂ ಸರಕಾರ ವರ್ಷಾನುಗಟ್ಟಲೇ ಆರೋಪಿತ ಅಧಿಕಾರಿಗಳನ್ನು ಕಾರ್ಯನಿರ್ವಹಿಸಲು ಬಿಟ್ಟರೆ, ಅವರಿನ್ನು ಏನು ಮಾಡಿಯಾರು ? ಮೇಯ್ದಿದ್ದೆ, ಮೆಯ್ದಿದ್ದು.

ಅಲ್ಲಿ ಇಲ್ಲಿ ಔಷಧ ಅಂಗಡಿಗಳಲ್ಲಿ ಕೆಲಸ ಮಾಡಿ, ಒಂದಿಷ್ಟು ಸರ್ವೀಸ್ ಮಾಡಿಕೊಂಡ ಹುಡುಗರು, ಹೊಸದಾಗಿ ಅಂಗಡಿ ಆರಂಭಿಸುತ್ತಾರೆ.ಪ್ರಪಗಂಡಾ, ಜನರಿಕ್ ಔಷಧಗಳ ಮಾರಾಟ ಮಾಡಿ ಹಣ ಗಳಿಸಬಹುದು ಎನ್ನುವುದು ಅವರ ಹುನ್ನಾರ.



ಅವರ ಹುನ್ನಾರವೇ ಈ ಅಧಿಕಾರಿಗಳಿಗೆ ಭಂಡವಾಳ.

ಹಾಗಂತ ಹೊಸದಾಗಿ ಔಷಧ ವ್ಯಾಪಾರಕ್ಕೆ ಮುಂದಾದವರು ಸುಮ್ಮನೆ ಕುಳಿತಿಲ್ಲ.ಹಣ ಕೊಟ್ಟದ್ದನ್ನು ಮತ್ತು ತೆಗೆದುಕೊಂಡದ್ದನ್ನು ತಮ್ಮ ಮೋಬೈಲ್ ಗಳಲ್ಲಿ ರೆಕಾರ್ಡ ಮಾಡಿಕೊಂಡಿದ್ದಾರೆ.ಆದರೆ ಈ ಚಿತ್ರಿಕರಣವನ್ನು ಬಹಿರಂಗ ಗೊಳಿಸುವುದರಿಂದ ತಮಗೆ ಅಧಿಕಾರಿಗಳಿಂದ ತೊಂದರೆಯಾಗಬಹುದೆಂದು ಸುಮ್ಮನಿದ್ದಾರೆ.

ಕೂಡಲೇ ಅವರಲ್ಲಿರುವ ಚಿತ್ರಿಕರಣ ಬಿಡುಗಡೆ ಮಾಡಿದರೆ, ಅಧಿಕಾರಿಗಳಿಂದ ತಮ್ಮ ಮುಂದಿನ ವ್ಯವಹಾರಕ್ಕೆ ತೊಂದರೆಯಾಗಬಹುದೆಂದು ಹೊಸ ಔಷಧ ವ್ಯಾಪಾರಿಗಳು ಹೆದರಿದ್ದಾರೆ.ವರ್ಗವಾದ ಮೇಲೆ ಬಿಡುಗಡೆ ಮಾಡಬೇಕೆಂದರೆ 'ವಜಾ' ಆಗಲಿರುವ ಪಟ್ಟಿಯಲ್ಲಿನ ಅಧಿಕಾರಿಗಳು ಈ ಸಾರಿ ವರ್ಗವಾಗಲಿಲ್ಲ.

ಹೇಗೂ ನೌಕರಿಯಿಂದ ವಜಾ ಆಗುತ್ತೇವೆ ಎಂದು ಕೊಂಡಿರುವ ಅಧಿಕಾರಿಗಳು ಅವಸರದಲ್ಲಿ ಅಪಾದನೆ ಹೊತ್ತ ಈ ಅಧಿಕಾರಿಗಳು ಹಣ ಮಾಡಲು ಹೊರಟಿದ್ದಾರೆ.ಈ ಮಹಾನ್ ಕೆಲಸ ಇಂತಹ ಅಧಿಕಾರಿಗಳಿಂದ ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ಅವದಿಯಿಂದಲೂ ನಡೆದಿದೆ.

ನೌಕರಿಯಿಂದ ವಜಾ ಆಗುವುದು ಗ್ಯಾರಂ-ಟಿಯಾಗಿದ್ದರೂ ಈ ಅಧಿಕಾರಿಗಳು ವರ್ಷದ ಮಾಮೂಲು ಸಂಗ್ರಹಿಸುವುದನ್ನೂ ಬಿಟ್ಟಿಲ್ಲ.ಇದಕ್ಕಾಗಿ ಅವರು ಔಷಧ ವ್ಯಾಪಾರಿಗಳ ದುಂಬಾಲು ಬಿದ್ದಿದ್ದಾರೆ.ಇದು ಔಷಧ ವ್ಯಾಪಾರಿ ಸಂಘಗಳ ಮುಖ್ಯಸ್ಥರನ್ನು ಪೇಚಿಗೆ ಸಿಕ್ಕಿಸಿದೆ.

ಹಣ ಹೊಂದಿಸಿ ಕೊಡದ ಔಷಧ ವ್ಯಾಪಾರಿ ಮುಖಂಡರ ಮೇಲೆ ಸುಖಾ ಸುಮ್ಮನೆ ಆರೋಪ ಮಾಡಿ,ಔಷಧ ವ್ಯಾಪಾರಿಗಳ ಸಂಘದಲ್ಲಿ ಭಿನ್ನಾಭಿಪ್ರಾಯಗಳನ್ನು ಹುಟ್ಟು ಹಾಕಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿ ಬಂದಿವೆ.

ಅಧಿಕಾರಿಗಳ ಚಾಡಿ ಮಾತನ್ನು ಕೂಡಲೇ ನಂಬುವ ಔಷಧ ವ್ಯಾಪಾರಿಗಳು,ತಮ್ಮ ಸಂಘದ ಪದಾಧಿಕಾರಿಗಳ ಮೇಲೆ ಅನುಮಾನ ಪಡುವಂತಾಗಿದೆ.ಬಹುತೇಕ ಜಿಲ್ಲೆಗಳಲ್ಲಿ ಔಷಧ ವ್ಯಾಪಾರಿಗಳ ಸಂಘಗಳನ್ನು ಒಡೆದು ಆಳುವ ನೀತಿಯನ್ನು ಮೈಗೂಡಿಸಿಕೊಂಡಿರುವ ಅಧಿಕಾರಿಗಳು ತಮ್ಮ 'ಕಲೆಕ್ಷನ್' ಕಾರ್ಯವನ್ನು ಸರಳವಾಗಿಸಿ ಕೊಳ್ಳುತ್ತಿದ್ದಾರೆ.

ರಾಜ್ಯ ಮತ್ತು ಜಿಲ್ಲೆಗಳಲ್ಲಿ ಸದೃಢ ಸಂಘಗಳು ಇಲ್ಲದಿರುವುದು,ಅಧಿಕಾರಿಗಳ ಪಾಲಿಗೆ ವರವಾಗಿ ಪರಿಣಮಿಸಿದೆ.ಔಷಧ ವ್ಯಾಪಾರಿಗಳ ಒಗ್ಗಟ್ಟನ್ನು ಒಡೆಯುವಲ್ಲಿ ಅಧಿಕಾರಿಗಳದ್ದೇ ಮೇಲುಗೈ ! ವಿಧಿ ಇಲ್ಲದೇ ಔಷಧ ವ್ಯಾಪಾರಿಗಳು ಅಧಿಕಾರಿಗಳ ಮಾತಿಗೆ, ಬೇಡಿಕೆಗೆ ಸ್ಪಂದಿಸಲೇ ಬೇಕಾದ ಅನಿವಾರ್ಯತೆಗೆ ಒಗ್ಗಿ ಹೋಗಿದ್ದಾರೆ.

ಔಷಧ ವ್ಯಾಪಾರಿಗಳಿಗೆ ಸಂಘಗಳ ಸಹವಾಸಕ್ಕಿಂತ, ಅಧಿಕಾರಿಗಳ ಸಖ್ಯವೇ ಉತ್ತಮ ಎನ್ನುವ ವಾತಾವರಣ ನಿರ್ಮಾಣವಾಗಿ ಬಿಟ್ಟಿದೆ.ಅತ್ತ ಅಧಿಕಾರಿಗಳ ಮುಷ್ಟಿ ಬಿಗಿಯಾಗುತ್ತಿದ್ದರೆ,ಇತ್ತ ಔಷಧ ವ್ಯಾಪಾರಿಗಳ ಹಿಡಿತ ಬಿಗಿ ತಪ್ಪುತ್ತಿದೆ.

# “ನನ್ನೆಲ್ಲಾ ಮಿತ್ರರೇ...

ಇತ್ತೀಚಿನ ಕೆಲ ವರ್ಷಗಳಿಂದ ನಾನು, ನನಗೆ ವೈಯಕ್ತಿಕವಾಗಿ ತೀರಾ ಪರಿಚಿತರಿದ್ದ 8–10 ಜನರನ್ನು ಕಳೆದು ಕೊಂಡಿದ್ದೇನೆ.. ಅದರಲ್ಲೂ 40 ರ ಆಸುಪಾಸಿನಲ್ಲಿದ್ದ ಕೆಲ ಸೆಲೆಬ್ರಿಟಿಗಳು 'ಫಿಟ್ ' ಆಗಿರಲು ಅತೀ ಹೆಚ್ಚು ಶ್ರಮಿಸಿ ಮರಣಿಸಿದ್ದಾರೆ.. ಆದರೆ ಅವರೆಲ್ಲಾ ಕೇವಲ ಫಿಟ್ ಆಗಿರುವಂತೆ, ಸಿಕ್ಸ್ ಪ್ಯಾಕ್ ಹೊಂದಿರುವಂತೆ ಕಾಣುತ್ತಿದ್ದರಷ್ಟೆ....

ಜೀವನದಲ್ಲಿ ಎಲ್ಲದಕ್ಕೂ 'ಮಿತ' ವೇ ಮಂತ್ರ.. ಸೊನ್ನೆ ಅಥವಾ ನೂರು ಈ ಎರಡರಲ್ಲಿ ಯಾವುದರ ಕಡೆಗಿನ ತೀವ್ರ ತುಡಿತವಿದ್ದರೂ ಅದು ತಪ್ಪು. ಒಂದಿಪ್ಪತು ನಿಮಿಷಗಳ ಕಾಲದ ಮಿತವಾದ ವ್ಯಾಯಾಮ, ಎಲ್ಲವನ್ನೂ ತಿನ್ನುವುದು, ಅತಿ ಪಥ್ಯ ಬೇಕಿಲ್ಲ.. ಕಿವಿ ಹಣ್ಣು.. ಆಲೀವ್ ಎಣ್ಣೆ.. ಇವೆಲ್ಲಾ ಅಲ್ಲ.. ನಿಮ್ಮ ಪೂರ್ವಜರು ಏನೆಲ್ಲಾ ತಿನ್ನುವುದನ್ನು ರೂಢಿ ಮಾಡಿದ್ದಾರೋ ಅಂತಹ ಸ್ಥಳೀಯ, ಆಯಾ ಋತುಮಾನದಲ್ಲಿ ಸಿಗುವ, ನಿಮ್ಮ ಊರಿನಲ್ಲೇ ಲಭ್ಯವಾಗುವ ಎಲ್ಲವನ್ನೂ ಮಿತವಾಗಿ ತಿನ್ನಿ.. ಪೂರ್ಣ ಏಳು ಗಂಟೆಗಳ ನಿದ್ರೆ ಮಾಡಿ.. ನಿಮ್ಮ ದೇಹವನ್ನು ಸ್ಟೀರಾಯ್ಡ್ ಅಥವಾ ಸಾಧನೆ ಹೆಚ್ಚಿಸುವ ಔಷಧಗಳನ್ನು ಸೇವಿಸದೇ ಗೌರವಿಸಿ. ನೀವು ಏನೆಲ್ಲಾ ತಿನ್ನುತ್ತಾ ಬೆಳೆದಿರೋ ಅವನ್ನೇ ಮಿತ ಪ್ರಮಾಣದಲ್ಲಿ ತಿನ್ನಿ . ದಿನನಿತ್ಯ 20 ರಿಂದ 30 ನಿಮಿಷಗಳ ಕಾಲ ವ್ಯಾಯಾಮ, ಒಂದು ಉತ್ತಮ ನಡಿಗೆ.. ಇವಿಷ್ಟು ಸಾಕು.. ಎಲ್ಲಾ ರೀತಿಯ ಶಕ್ತಿವರ್ಧಕ, ಪೂರಕ ಆಹಾರ ನಿಲ್ಲಿಸಿ..ಕುಡಿಯುವ ಅಭ್ಯಾಸವಿದ್ದರೆ ವಾರಕ್ಕೆ ಕೆಲವು ಪೆಗ್ ಗಳಿಗಷ್ಟೇ ಸೀಮಿತಗೊಳಿಸಿ.. ಧೂಮಪಾನ ಬಿಡಲು ಸಾಧ್ಯವೇ ಇಲ್ಲ ಎನ್ನುವುದಾದರೆ ದಿನಕ್ಕೆ ಒಂದೆರಡಕ್ಕೆ ಸೀಮಿತಗೊಳಿಸಿ. ನನ್ನ ಮಾತಿನ ಸಾರಾಂಶ ನಿಮಗೆ ಅರ್ಥವಾಗಿರಬೇಕು.. ಎಲ್ಲವೂ ಇರಲಿ.. ಮಿತವಾಗಿರಲಿ.. ನಿಮ್ಮ ನಿತ್ಯಕರ್ಮದಲ್ಲಿ ಸ್ವಲ್ಪ ಮೌನ ಧ್ಯಾನವನ್ನು ಸೇರಿಸಿಕೊಳ್ಳಿ. ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮ ದೇಹದ ಮಾತಿಗೆ ಕಿವಿಗೊಡಿ.. ಅದನ್ನು ಅರ್ಥಮಾಡಿ ಕೊಳ್ಳಿ.. 40 ಕ್ಕೆ ನಿಮ್ಮ ದೇಹ ಸಾಕಷ್ಟು ಬದಲಾವಣೆಗೊಳಗಾಗುತ್ತದೆ, 50 ಕ್ಕೆ ಇನ್ನಷ್ಟು ಹೆಚ್ಚು.. 60 ಮೀರಿದೊಡನೆ ದೇಹ ಮಂದವಾಗತೊಡಗುತ್ತದೆ.. 70 ಮೀರಿದೊಡನೆ ಅಂತ್ಯಕ್ಕೆ ಅಣಿಗೊಳ್ಳಲಾರಂಭಿಸುತ್ತದೆ..80 ಮೀರಿತೆ–ಂದರೆ ಪ್ರತಿ ವರ್ಷವೂ ಒಂದೊಂದು ಬೋನಸ್.. ಆದ್ದರಿಂದ ಅರವತ್ತು ಎಂದರೆ ಹೊಸ ನಲವತ್ತು, ಐವತ್ತು ಎಂದರೆ ಹೊಸ ಮೂವತ್ತು, ಎನ್ನುವುದನ್ನೆಲ್ಲಾ ಬಿಟ್ಟು ಬಿಡಿ. ಅದು ಹಾಗಲ್ಲ..ನೀವು 40 ಅಥವಾ 50 ಮೀರಿ ಆರೋಗ್ಯವಂತರಾಗಿದ್ದರೆ ಅದಕ್ಕಾಗಿ ಧನ್ಯತೆ ಭಾವ ಹೊಂದಿರಿ.. ನಿಮ್ಮ ಹೃದಯದ ವೇಗಕ್ಕೆ ಹೊಂದುವಂತೆ ನಿಮ್ಮ ವೇಗವನ್ನೂ ವಯೋ ಮಾನಕ್ಕನುಗುಣವಾಗಿ ತಗ್ಗಿಸಿ ಸಂಯಮ ತೋರಿ. ನಿವೃತ್ತಿಯನ್ನು ಒಂದು ಸಕಾರಣಕ್ಕಾಗಿ ಸಲಹೆ ಮಾಡಲಾಗುತ್ತದೆ ಎಂಬುದನ್ನು ಅರಿಯಿರಿ.. ನೀವು ಹಿಂದೊಮ್ಮೆ ಸಹಿಸುತ್ತಿದ್ದ ಒತ್ತಡಗಳನ್ನು ಇದೀಗ ನಿಮ್ಮ ದೇಹ ಮತ್ತು ಮನಸ್ಸುಗಳು ಸಹಿಸಲಾರವು. ಹೊರಗಿನಿಂದ ನೀವು ಚೆನ್ನಾಗಿಯೇ ಕಾಣುತ್ತಿರಬಹುದು, ಅದಕ್ಕಾಗಿ ನಿಮ್ಮ ವಂಶವಾಹಿನಿಗೆ ಒಂದು ಕೃತಜ್ಞತೆ ಇರಲಿ.. ಆದರೆ ಒಳಗೆ, ನಿಮ್ಮ ಅಂಗಾಂಗಗಳಿಗೆ ವಯಸ್ಸಾಗುತ್ತಿದೆ.... ನೀವು 40 ಮೀರಿದ ವಯೋಮಾನದವರಾದರೆ ಈ ಮೇಲಿನದೆಲ್ಲಾ ಓದಿ. ಮೇಲೆ ತಿಳಿಸಿದ್ದಕ್ಕಿಂತ ತೀರಾ ಭಿನ್ನವಾದದ್ದನ್ನೇನಾದರೂ ನೀವು ಮಾಡುತ್ತಿದ್ದರೆ, ಈ ಕೂಡಲೇ ಬದಲಿಸಿ.. ನೀವು ಸಹಾ ಇನ್ನೊಂದು ಅಂಕಿ – ಅಂಶವಾಗಿ ಕೊನೆಯಾಗಲು ಬಯಸಲಾರಿರಿ ಎಂಬ ವಿಶ್ವಾಸ ನನಗಿದೆ.”

ಅಮೇರಿಕಾದಲ್ಲಿ ವೈದ್ಯಕೀಯ ಅಧಿಕಾರಿಗಳು ಪ್ರತಿಯೊಬ್ಬರಿಗೂ ಮತ್ತು ಎಲ್ಲರಿಗೂ ಸಹಾಯ ಮಾಡಲು ಇದನ್ನು ಕಳುಹಿಸಿದ್ದಾರೆ. ದಯವಿಟ್ಟು ಓದಿ ಮತ್ತು ನಿಮ್ಮ ಬಗ್ಗೆ ಕಾಳಜಿ ವಹಿಸಿ – ಡಾ. ಒಕಿರೆ. ಕಿಡ್ನಿ ಕಾಯಿಲೆಯಿಂದ ಯುವಕರು ಯಾವ ಪ್ರಮಾಣದಲ್ಲಿ ಬಳಲುತ್ತಿದ್ದಾರೆ ಎಂಬುದು ಆತಂಕಕಾರಿ. ನಾನು ನಮಗೆ ಸಹಾಯ ಮಾಡುವಂತಹ ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿದ್ದೇನೆ. ದಯವಿಟ್ಟು ಕೆಳಗೆ ಓದಿ:

ಪ್ರಮುಖ – ಕಿಡ್ನಿ ಅತ್ಯುತ್ತಮವಾದುದನ್ನು ನಿರ್ಧರಿಸುತ್ತದೆ. ಕೇವಲ ಎರಡು (2) ದಿನಗಳ ಹಿಂದೆ, ಮೂತ್ರಪಿಂಡದ ಕಾಯಿಲೆಯ ಪರಿಣಾಮವಾಗಿ ನೈಜೀ–ರಿಯಾದ ನಟನ ನಿಧನದ ಸುದ್ದಿಯನ್ನು ನಾವೆಲ್ಲರೂ ಸ್ವೀಕರಿಸಿದ್ದೇವೆ. ಸಾರ್ವಜನಿಕ ಕಾರ್ಯಗಳ ನಮ್ಮ ಸಚಿವರಾದ ಗೌರವಾನ್ವಿತ ಟೆಕೊ ಲೇಕ್ ಪ್ರಸ್ತುತ ಆಸ್ಪತ್ರೆಯಲ್ಲಿ ಮೂತ್ರಪಿಂಡದ ಸಮಸ್ಯೆಗಳೊಂದಿಗೆ ಲೈಫ್ ಸಪೋರ್ಟ್ ನ ಬೆಂಬಲ ದಲ್ಲಿದ್ದಾರೆ. ಮೂತ್ರಪಿಂಡದ ಕಾಯಿಲೆಯ ಈ ಭೀತಿಯನ್ನು ತಪ್ಪಿಸುವುದು ಹೇಗೆ ಎಂದು ನಾನು ನಿಮಗೆ ತೋರಿಸಲು ಬಯಸುತ್ತೇನೆ. ಇಲ್ಲಿ ಕಿಡ್ನಿ ಕಾಯಿಲೆಯ ಮೊದಲ 6 ಕಾರಣಗಳು

1. ಶೌಚಾಲಯಕ್ಕೆ ಹೋಗಲು ವಿಳಂಬ. ನಿಮ್ಮ ಮೂತ್ರವನ್ನು ನಿಮ್ಮ ಮೂತ್ರಕೋಶದಲ್ಲಿ ಹೆಚ್ಚು ಹೊತ್ತು ಇಡುವುದು ಕೆಟ್ಟ ಸಂಗತಿಯಾಗಿದೆ. ಪೂರ್ಣ ಬ್ಲಾ ಡರ್, ಬ್ಲಾಡರ್ ಹಾನಿಗೆ ಕಾರಣವಾಗಬಹುದು. ಮೂತ್ರಕೋಶದಲ್ಲಿ ಉಳಿಯುವ ಮೂತ್ರವು ಬ್ಯಾಕ್ಟೀರಿಯಾವನ್ನು ತ್ವರಿತವಾಗಿ ಗುಣಿಸುತ್ತದೆ. ಮೂತ್ರವು ಮೂತ್ರನಾಳ ಮತ್ತು ಮೂತ್ರಪಿಂಡಗಳಿಗೆ ಹಿಂತಿರುಗಿದ ನಂತರ, ವಿಷಕಾರಿ ವಸ್ತುಗಳು ಮೂತ್ರಪಿಂಡದ ಸೋಂಕು, ನಂತರ ಮೂತ್ರದ ಸೋಂಕು, ಮತ್ತು ನಂತರ ನೆಫ್ರೈಟಿಸ್ ಮತ್ತು ಯುರೇಮಿಯಾಗಳಿಗೆ ಕಾರಣವಾಗಬಹುದು. ಪ್ರಕೃತಿ ಕರೆ ಮಾಡಿದಾಗ – ಸಾಧ್ಯವಾದಷ್ಟು ಬೇಗ ಅದನ್ನು ಮಾಡಿ.

2. ಹೆಚ್ಚು ಉಪ್ಪು ತಿನ್ನುವುದು. ನೀವು ಪ್ರತಿದಿನ 5.8 ಗ್ರಾಂ ಗಿಂತ ಹೆಚ್ಚಾಗಿ ಉಪ್ಪನ್ನು ಸೇವಿಸಬಾರದು.

3. ಹೆಚ್ಚು ಮಾಂಸ ತಿನ್ನುವುದು. ನಿಮ್ಮ ಆಹಾರದಲ್ಲಿ ಹೆಚ್ಚು ಪ್ರೋಟೀನ್ ನಿಮ್ಮ ಮೂತ್ರಪಿಂಡಗಳಿಗೆ ಹಾನಿಕಾರಕವಾಗಿದೆ. ಪ್ರೋಟೀನ್ ಜೀರ್ಣಕ್ರಿಯೆಯು ಅಮೋನಿಯಾವನ್ನು ಉತ್ಪಾದಿಸುತ್ತದೆ – ಇದು ನಿಮ್ಮ ಮೂತ್ರಪಿಂಡಗಳಿಗೆ ಬಹಳ ಹಾನಿಕಾರಕವಾಗಿದೆ. ಹೆಚ್ಚು ಮಾಂಸವು ಹೆಚ್ಚು ಮೂತ್ರಪಿಂಡದ ಹಾನಿಗೆ ಸಮನಾಗಿರುತ್ತದೆ.

4. ಹೆಚ್ಚು ಕೆಫೀನ್ ಕುಡಿಯುವುದು. ಕೆಫೀನ್ ಅನೇಕ ಸೋಡಾಗಳು ಮತ್ತು ತಂಪು ಪಾನೀಯಗಳ ಒಂದು ಅಂಶವಾಗಿದೆ. ಇದು ನಿಮ್ಮ ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಮತ್ತು ನಿಮ್ಮ ಮೂತ್ರಪಿಂಡಗಳು ಬಳಲುವುದಕ್ಕೆ ಎಡೆ ಯಗಿದೆ. ಆದ್ದ–ರಿಂದ ನೀವು ಪ್ರತಿದಿನ ಕುಡಿಯುವ ಕೋಕ್ ಪ್ರಮಾಣವನ್ನು ಕಡಿತಗೊಳಿಸಬೇಕು.

5. ನೀರು ಕುಡಿಯುವುದಿಲ್ಲ. ನಮ್ಮ ಮೂತ್ರಪಿಂಡಗಳು ಅವುಗಳ ಕಾರ್ಯಗಳನ್ನು ಸರಿಯಾಗಿ ನಿರ್ವಹಿಸಲು ಸರಿಯಾಗಿ ಹೈಡ್ರೀಕರಿಸಬೇಕು. ನಾವು ಸಾಕಷ್ಟು ಕುಡಿಯದಿದ್ದರೆ, ಮೂತ್ರಪಿಂಡಗಳ ಮೂಲಕ ಹರಿಯುವಷ್ಟು ದ್ರವವಿಲ್ಲದ ಕಾರಣ ವಿಷವು ರಕ್ತದಲ್ಲಿ ಸಂಗ್ರಹಗೊಳ್ಳಲು ಪ್ರಾರಂಭಿಸಬಹುದು. ಪ್ರತಿದಿನ 10 ಗ್ಲಾಸ್ ಗಿಂತ ಹೆಚ್ಚು ನೀರು ಕುಡಿಯಿರಿ. ನೀವು ಕುಡಿಯುತ್ತೀರಾ ಎಂದು ಪರೀಕ್ಷಿಸಲು ಸುಲಭವಾದ ಮಾರ್ಗವಿದೆ ಸಾಕಷ್ಟು ನೀರು: ನಿಮ್ಮ ಮೂತ್ರದ ಬಣ್ಣವನ್ನು ನೋಡಿ; ಹಗುರವಾದ ಬಣ್ಣವಾದರೆ ಉತ್ತಮ.

6. ತಡವಾಗಿ ಚಿಕಿತ್ಸೆ. ನಿಮ್ಮ ಎಲ್ಲಾ ಆರೋಗ್ಯ ಸಮಸ್ಯೆಗಳಿಗೆ ಸರಿಯಾಗಿ ಚಿಕಿತ್ಸೆ ನೀಡಿ ಮತ್ತು ನಿಮ್ಮ ಆರೋಗ್ಯವನ್ನು ನಿಯಮಿತವಾಗಿ ಪರೀಕ್ಷಿಸಿ. ನಾವೇ ಸಹಾಯ ಮಾಡೋಣ ... ದೇವರು ನಿಮ್ಮನ್ನು ಮತ್ತು ನಿಮ್ಮ ಕುಟುಂಬವನ್ನು ಈ ವರ್ಷ ಪ್ರತಿಯೊಂದು ಕಾಯಿಲೆಯಿಂದ ರಕ್ಷಿಸುತ್ತಾನೆ.

(3) ಈ ಮಾತ್ರೆಗಳನ್ನು ತಪ್ಪಿಸಿ, ಅವು ತುಂಬಾ ಅಪಾಯಕಾರಿ: ಅವುಗಳು ಫೆನೈಲ್ ಪ್ರೊಪನಾಲ್–ಅಮೈಡ್, ಪಿಪಿಎ ಅನ್ನು ಒಳಗೊಂಡಿರುತ್ತವೆ ಪಾರ್ಶ್ವವಾಯುಗೆ ಕಾರಣವಾಗಿದ್ದು ಮತ್ತು ಯುಎಸ್ಎ ದಲ್ಲಿ ನಿಷೇದಪಡಿಸಿದ್ದಾರೆ. ದಯವಿಟ್ಟು, ಅಳಿಸುವ ಮೊದಲು, ಅದನ್ನು ಹಾದುಹೋಗುವ ಮೂಲಕ ನಿಮ್ಮ ಸ್ನೇಹಿತರಿಗೆ ಸಹಾಯ ಮಾಡಿ ..! ಇದು ಯಾರಿಗಾದರೂ ಸಹಾಯ ಮಾಡಬಹುದು. ಎಷ್ಟು ಸಾಧ್ಯವೋ ಅಷ್ಟು ಫಾರ್ ವರ್ಡ್ ಮಾಡಿ. ವಾಟ್ಸಾಪ್ ಉಚಿತ, .... ದಯವಿಟ್ಟು ಫಾರ್ಡ್ ವರ್ಡ್ ಮಾಡಿ.. ಇದನ್ನು ಓದಿ ಮತ್ತು ಫಾರ್ವರ್ಡ್ ಮಾಡಿ. ಯುನೈಟೆಡ್ ಸ್ಟೇಟ್ಸ್ನ ವೈದ್ಯರು ಸಿಲ್ವರ್ ನೈ–ಟ್ರೋ ಆಕ್ಸೈಡ್ನಿಂದ ಉಂಟಾಗುವ ಮಾನವರಲ್ಲಿ ಹೊಸ ಕ್ಯಾನ್ಸರ್ ಅನ್ನು ಕಂಡುಕೊಂಡಿದ್ದಾರೆ. ನೀವು ರೀಚಾರ್ಜ್ ಕಾರ್ಡ್‌ಗಳನ್ನು ಖರೀದಿಸಿದಾಗಲೆಲ್ಲಾ, ನಿಮ್ಮ ಉಗುರುಗಳಿಂದ ಸ್ಕ್ರಾಚ್ ಮಾಡಬೇಡಿ, ಏಕೆಂದರೆ ಇದು ಸಿಲ್ವರ್ ನೈಟ್ರೋ ಆಕ್ಸೈಡ್ ಲೇಪನವನ್ನು ಹೊಂದಿರುತ್ತದೆ ಮತ್ತು ಚರ್ಮದ ಕ್ಯಾನ್ಸರ್ಗೆ ಕಾರಣವಾಗಬಹುದು.

ಪ್ರಮುಖ ಆರೋಗ್ಯ ಸಲಹೆಗಳು:

1. ಎಡ ಕಿವಿಯಿಂದ ಫೋನ್ ಕರೆಗಳಿಗೆ ಉತ್ತರಿಸಿ.
2. ನಿಮ್ಮ ಔಷಧಿ ಯನ್ನು ತಣ್ಣೀರಿನ ಜೊತೆ ತೆಗೆದುಕೊಳ್ಳಬೇಡಿ
3. ಸಂಜೆ 5 ರ ನಂತರ ಹೆಚ್ಚಿನ ಊಟ ಸೇವಿಸಬೇಡಿ.
4. ಬೆಳಿಗ್ಗೆ ಹೆಚ್ಚು ನೀರು ಕುಡಿಯಿರಿ, ರಾತ್ರಿಯಲ್ಲಿ ಕಡಿಮೆ.
5. ರಾತ್ರಿ 10 ರಿಂದ ಬೆಳಿಗ್ಗೆ 4 ರವರೆಗೆ ಉತ್ತಮ ನಿದ್ರೆ ಸಮಯ.
6. ಔಷಧಿ ತೆಗೆದುಕೊಂಡ ನಂತರ ಅಥವಾ ಊಟ ಮಾಡಿದ ಕೂಡಲೇ ಮಲಗಬೇಡಿ.
7. ಫೋನ್‌ನ ಬ್ಯಾಟರಿ ಕೊನೆಯ ಬಾರ್‌ಗೆ ಕಡಿಮೆ ಇರುವಾಗ, ಫೋನ್‌ಗೆ ಉತ್ತರಿಸಬೇಡಿ, ಏಕೆಂದರೆ ವಿಕಿರಣವು 1000 ಪಟ್ಟು ಬಲವಾಗಿರುತ್ತದೆ.




## ಬೆಂಗಳೂರಿನ ನಾರಾಯಣ ಹೃದಯಾಲಯದ ನಿರ್ದೇಶಕರು ವಿಶ್ವದ ಅಗ್ರಮಾನ್ಯ..

## ಹೃದಯತಜ್ಞರಲ್ಲಿ ಒಬ್ಬರಾದ ಡಾ ದೇವಿಶೆಟ್ಟಿ ಯವರ ಸಂದೇಶ

# ಹುಲಿಗಿ, ಮುನಿರಾಬಾದ, ಮಲ್ಲಾಪುರ, ಹೊಳೆನಿಂಗಾಪುರ ಚಾರಿತ್ರಿಕ ಸಂಗತಿಗಳು ಮತ್ತು ತುಂಗಾಭದ್ರ ಅಣೆಕಟ್ಟು ಹಾಗೂ ರೇಲ್ವೆ ನಿಲ್ದಾಣಗಳ ಸ್ಥಾಪನೆಯ ರೋಚಕ ಸಂಗತಿಗಳು

ತುಂಗಾಭದ್ರೆ ಕರ್ನಾಟಕದ ನಾಲ್ಕು ಜಿಲ್ಲೆ ಮತ್ತು ಆಂಧ್ರದ ಕೆಲ ಜಿಲ್ಲೆಗಳ ಜೀವನಾಡಿಯಾಗಿದೆ. ?ತುಂಗಾ? ಮತ್ತು ?ಭದ್ರೆ? ಎರಡೂ ನದಿಗಳು ಸಮ್ಮಿಲನವಾಗಿ ಹರಿದು ಬರುತ್ತಿರುವ ಜೀವನದಿಗೆ ಅಡ್ಡಲಾಗಿ ಕಟ್ಟಿರುವ ಈ ಅಣೆಕಟ್ಟಿನಿಂದ ಎಷ್ಟೋ ರೈತರ ಬದುಕಿಗೆ ಉಸಿರಾಗಿದೆ. ಅದರ ಜೊತೆಗೆ ಸುತ್ತಮುತ್ತಲಿನ ಅನೇಕ ಕಾರ್ಖಾನೆಗಳಿಗೆ ನೀರಿನ ಪೂರೈಕೆಯಾಗುತ್ತಾ ಸಾವಿರಾರು ಕಾರ್ಮಿಕರಿಗೆ ಬದುಕಾಗಿದೆ. ಇಂತಹ ಮಹತ್ವ ಹೊಂದಿರುವ ಅಣೆಕಟ್ಟಿನ ಸುತ್ತಮುತ್ತಲಿನ ಗ್ರಾಮಗಳು, ರೈಲ್ವೆ ನಿಲ್ದಾಣದ ನಿರ್ಮಾಣದ ಕುರಿತು ಕೆಲವು ರೋಚಕ ಸಂಗತಿಗಳನ್ನು ತಿಳಿದುಕೊಳ್ಳುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

**ಹುಲಿಗಿ:-**

ಕೊಪ್ಪಳ ತಾಲೂಕಿನ ಹುಲಿಗಿ ಗ್ರಾಮವು ಶಕ್ತಿಕೇಂದ್ರ. ಪ್ರಾಚೀನ ಕಾಲದಲ್ಲಿ ಇದೊಂದು ಬಹುದೊಡ್ಡ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು. 10-11ನೇ ಶತಮಾನಕ್ಕೆ ಮೊದಲೇ ಇದೊಂದು ಬಹುದೊಡ್ಡ ಐತಿಹಾಸಿಕ ಕೇಂದ್ರವಾಗಿತ್ತೆಂದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಇದು ನಾಡಿನ ತುಂಬೆಲ್ಲಾ ಹೆಸರುವಾಸಿಯಾದ ಗ್ರಾಮ ಎಂದರೂ ನಡಿಯುತ್ತೆ. ಏಕೆಂದರೆ ಇಲ್ಲಿ ನಡೆಯುವ ಹುಲಿಗೆಮ್ಮ ದೇವಿಯ ಜಾತ್ರೆ ಬಹು ಪ್ರಸಿದ್ಧಿಯಾಗಿದೆ. ಈ ಜಾತ್ರೆಗೆ ನಾಡಿನ ಜನತೆಯಷ್ಟೇ ಅಲ್ಲ ಅಕ್ಕ-ಪಕ್ಕದ ರಾಜ್ಯಗಳಾದ ಆಂಧ್ರ, ತೆಲಂಗಾಣ, ಮಹಾರಾಷ್ಟ್ರ, ಗೋವಾ ಮುಂತಾದ ರಾಜ್ಯಗಳಿಂದಲೂ ಭಕ್ತರು ಬಂದು ಹೋಗುವ ಪುಣ್ಯಕ್ಷೇತ್ರವಿದು. ಈ ಗ್ರಾಮಕ್ಕೆ ಎಷ್ಟು ಇತಿಹಾಸವಿದೆಯೋ; ಇಲ್ಲಿ ನಡೆಯುವ ಹುಲಿಗಿ ಜಾತ್ರೆಗೂ ಸಹ ಅಷ್ಟೇ ಬಹುದೊಡ್ಡ ಚರಿತ್ರೆಯಿದೆ. ಜನಪದರು ಹುಲಗಿ, ಹುಲಿಗಿ, ಹುಲಿಗೆಮ್ಮ, ಹುಲಿಗೆರಮ್ಮ ಎಂಬ ಮುಂತಾದ ಹೆಸರುಗಳಿಂದ ಈ ಗ್ರಾಮವನ್ನು ಮತ್ತು ಈ ಗ್ರಾಮದ ದೇವತೆಯನ್ನು ಕರೆಯುತ್ತಾರೆ. ಈ ಗ್ರಾಮದ ಹೆಸರಿನ ಮೇಲೆ ಇಲ್ಲಿ ನೆಲೆಸಿರುವ ದೇವತೆಗೆ ?ಹುಲಿಗೆಮ್ಮ? ಎಂಬ ಹೆಸರಿನಿಂದ ಕರೆಯಲಾಯಿತೋ ಅಥವಾ ಇಲ್ಲಿ ನೆಲೆಸಿರು ದೇವತೆಯ ಹೆಸರಿನ ಮೇಲೆ ಈ ಗ್ರಾಮಕ್ಕೆ ?ಹುಲಗಿ? ಎಂಬ ಗ್ರಾಮನಾಮ ಬಂತೋ ಎಂಬ ಮಾಹಿತಿ ಲಭ್ಯವಾಗುವುದಿಲ್ಲಾ. ಆದರೂ 10ನೇ ಶತಮಾನದ ಶಾಸನಗಳಲ್ಲಿ ಈ ಗ್ರಾಮವನ್ನು ?ಪುಲಗಿ?(ಹುಲಗಿ) ಎಂತಲೂ ಉಲ್ಲೇಖಿಸಲಾಗಿದೆ. ಅಂದರೆ ಈ ಕಾಲಕ್ಕಿಂತಲೂ ಮೊದಲೇ ಈ ಗ್ರಾಮ ಇತ್ತೆಂಬುದು ತಿಳಿದುಬರುತ್ತದೆ. ಅದಕ್ಕಿಂತ ಮುಖ್ಯವಾಗಿ ರಾಮಾಯಣ ಕಾಲದಲ್ಲಿ ಉಲ್ಲೇಖಿತ ವಾನರ ರಾಜ್ಯ ?ಕಿಷ್ಕಿಂದೆ? ಪ್ರದೇಶದಲ್ಲಿ ಈ ಹುಲಗಿ ಗ್ರಾಮ ಇತ್ತೆಂದು ಇದೇ ಗ್ರಾಮದಲ್ಲಿ ದೊರೆತ ಶಾಸನದಿಂದ ತಿಳಿದುಬರುತ್ತದೆ. ಆ ಮಾತಿನಲ್ಲಿ ಗಮನಿಸಿದರೆ ಈ ಗ್ರಾಮದ ಚರಿತ್ರೆ ಕ್ರಿ.ಪೂ ಸುಮಾರು ನಾಲ್ಕೈದು ಸಾವಿರ ವರ್ಷಗಳ ಹಿಂದೆ ಹೋಗುತ್ತದೆ. ಇದರ ಜೊತೆಗೆ ಇಲ್ಲಿ ದೊರೆತ ಶಾಸನಗಳು, ಪ್ರಾಚೀನ ದೇವಸ್ಥಾನಗಳು ಮತ್ತು ಮೂರ್ತಿ-ಶಿಲ್ಪಗಳು ಈ ಗ್ರಾಮದ ಚರಿತ್ರೆಯ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ. ಈ ಗ್ರಾಮದಲ್ಲಿ ಬಹುಪ್ರಾಚೀನ ಮತ್ತು ಪ್ರಸಿದ್ಧಿಯಾದ ಹುಲಿಗೆಮ್ಮ ಎಂಬ ಹೆಣ್ಣು ದೇವರ ದೇವಾಲಯವಿದೆ. ಅದರ ಹತ್ತಿರದಲ್ಲೆ ಸೋಮೇಶ್ವರ ದೇವಸ್ಥಾನವಿದೆ. ಅದರ ಸುತ್ತ-ಮುತ್ತಲಿನಲ್ಲಿ ನಾಲ್ಕು ಈಶ್ವರ ದೇವಾಲಯಗಳಿವೆ. ಹೀಗೆ ಒಟ್ಟು ಐದು ಶೈವ ದೇವಾಲಯಗಳಿರುವ ಈ ದೇವಾಲಯ ಸಮುಖ್ಯವನ್ನು ಪ ೦ ಚ ಲಿ ೦ ಗ ದೇವಾಲಯಗಳು ಎಂದು ಕರೆಯುತ್ತಾರೆ. ಸೋಮೇಶ್ವರ ದೇವಸ್ಥಾನ ಮಾತ್ರ ಉತ್ತಮ ಸ್ಥಿತಿಯಲ್ಲಿದ್ದು ದೊಡ್ಡ ಪ್ರಮಾಣದಲ್ಲಿದೆ. ಅವುಗಳಲ್ಲಿ ಮೂರು ದೇವಸ್ಥಾನಗಳ ಹೆಸರುಗಳು ಇಂದು ಬದಲಾವಣೆಯಾಗಿವೆ. ಒಂದಕ್ಕೆ ಗಣಪತಿ, ಮತ್ತೊಂದಕ್ಕೆ ಪಾರ್ವತಿ, ಇನ್ನೊಂದಕ್ಕೆ ಸುಬ್ರಮಣ್ಯ ದೇವಸ್ಥಾನ ಎಂದು ಕರೆಯುತ್ತಾರೆ. ಸ್ವಲ್ಪ ದೂರದಲ್ಲೇ ಇರುವ ಇನ್ನೊಂದು ದೇವಾಲಯ ಪೂರ್ಣ ಪ್ರಮಾಣದಲ್ಲಿ ನಾಶವಾಗಿದೆ. ದೇವಾಲಯದ ಒಳ ಪ್ರವೇಶಿಸಲೂ ಆಗದಿರುವುದರಿಂದ ಅದಕ್ಕೆ ಪ್ರವೇಶ ನಿಷೇಧವಿದೆ. ಹೀಗೆ ಒಟ್ಟು ಐದು ಶೈವ ದೇವಾಲಯಗಳ ಸಮೂಹವಿದು. ಹಾಗೆಯೇ ಈ ಗ್ರಾಮದಲ್ಲಿ ಮಾರುತಿ ಎಂಬ ಪ್ರಾಚೀನ ದೇವಸ್ಥಾನವಿದೆ. ಅದರ ಬಗ್ಗೆ ಹೆಚ್ಚಿನ ಇತಿಹಾಸ ತಿಳಿದುಬರುವುದಿಲ್ಲ. ಉಳಿದಂತೆ ಬಿದ್ದು ಹೋಗಿರುವ ಒಂದು ಬ್ರಹ್ಮಗುಡಿ ಮತ್ತು ಕ್ರಿ.ಶ. ಸುಮಾರು 1807ರಲ್ಲಿ ನಿರ್ಮಾಣವಾಯಿತೆಂದು ಹೇಳಲಾಗುವ ಪಾರ್ಶ್ವನಾಥ ಬಸದಿ ಇದೆ. ಈ ಬಸದಿ ಸುಸ್ಥಿತಿಯಲ್ಲಿದ್ದು ಇಂದು ಪೂಜಿಸಲ್ಪಡುತ್ತಿದೆ. ಉಳಿದಂತೆ ಯಾವುದೇ ಪ್ರಾಚೀನ ಕುರುಹುಗಳು ಈ ಗ್ರಾಮದಲ್ಲಿ ಲಭ್ಯವಿಲ್ಲ. ಈ ಗ್ರಾಮದಲ್ಲಿ ಇದುವರೆಗೆ ಮೂರು ಶಾಸನಗಳು ಪತ್ತೆಯಾಗಿವೆ. ಅವುಗಳಲ್ಲಿ ಒಂದು ಸೋಮೇಶ್ವರ ದೇವಸ್ಥಾನದಲ್ಲಿರುವ ಕ್ರಿ.ಶ 1088ರ ಶಾಸನ ಸ್ಪಷ್ಟವಾಗಿದ್ದು ಓದಲು ಬರುತ್ತಿದೆ. ಉಳಿದೆರಡು ಶಾಸನಗಳು ಒಂದೆರಡು ಸಾಲಿನವುಗಳಾಗಿದ್ದು ಅಸ್ಪಷ್ಟವಾಗಿರುವ ಕಾರಣಕ್ಕಾಗಿ ಅವುಗಳಿಂದ ಯಾವುದೇ ಮಾಹಿತಿ ವದೊರೆಯುವುದಿಲ್ಲ.



ಕ್ರಿ.ಶ. 1088ರ ಕಾಲದ ಈ ಶಾಸನವು ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ್ದಾಗಿದೆ. ಕಾಮಕಾಯನ ಗೋತ್ರದ ನಾರಾಯಣ ಭಟ್ಟೋಪಾಧ್ಯಯನ ಮಗ ಚೌವೇದಿಭಟ್ಟನು ಪುಲಗಿ(ಹುಲಗಿ) ಎಂಬ ಪುರವನ್ನು ವಿಕ್ರಮಾದಿತ್ಯನಿಂದ ಪಡೆದು ತುಂಗಾಭದ್ರ ನದಿಯಿಂದ ಸೀಳುನಾಲೆಯೊಂದನ್ನು ತಂದಂತೆ ಹೇಳಿದೆ. ಇವನ ಪತ್ನಿ ಅಚ್ಚಿಕಬ್ಬೆ ಇದ್ದಳು. ಇವರಿಗೆ ನಾರಣಭಟ್ಟ, ದ್ರೋಣಭಟ್ಟ, ಸೋಮನಾಥ, ಮಾರಯ್ಯಭಟ್ಟ ಮತ್ತು ರುದ್ರಾದಿತ್ಯ ಎಂಬ ಐವರು ಮಕ್ಕಳಿದ್ದರು. ಅವರಲ್ಲಿ ಸೋಮನಾಥನು ರುದ್ರಸ 'ದ್ಮವನ್ನು(ಶಿವದೇವಾಲಯ) ಮಾಡಿಸಿದನೆಂದು ತಿಳಿಸುತ್ತದೆ. ಈ ಊರಿನ ಪೂರ್ವಕ್ಕೆ ರಿಷ್ಯಮೂಕಾಚಲ, ದಕ್ಷಿಣಕ್ಕೆ ಗಂಧಮಾಧವ, ಪಶ್ಚಿಮಕ್ಕೆ ತ್ರಿಕೂಟ, ಉತ್ತರಕ್ಕೆ ಕಿಷ್ಕಿಂದೆ ಪರ್ವತಗಳಿದ್ದವು. ಇವುಗಳ ಮಧ್ಯೆ ಇರುವ ಸುಂದರ ಪ್ರದೇಶದಲ್ಲಿ ಪುಲಿಗೆಯೂರಿನ ಒಡೆಯನಾದ ಸೋಮನಾಥನ ದೇವಾಲಯವನ್ನು ಮಾಡಿಸಿದನೆಂದಿದೆ. ಈ ಸೋಮನಾಥನ ಪತ್ನಿಯಾಗಿ ಮಂಚಿಕಬ್ಬೆ ಇದ್ದಳು. ಈ ದಂಪತಿಗಳಿಬ್ಬರೂ ಕೂಡಿ ತಾವು ಪ್ರತಿಷ್ಠಾಪನೆ ಮಾಡಿಸಿದ ಸೋಮೇಶ್ವರ ದೇವರಿಗೆ ಊರಿನ ಪೂರ್ವಕ್ಕೆ ಗುಯ್ಯಲ ತೋಟ, ಪರಿವೀರ ತೋಟವನ್ನು ಚತುಸ್ಸೀಮಾ ಸಮೇತವಾಗಿ ನೀಡುತ್ತಾ-ರೆ. ಇದಲ್ಲದೆ ಮನೆಗಳನ್ನು ಭೃತ್ಯ ದಾಸಿವರ್ಗ ಸಹಿತವಾಗಿ ಧಾರಾಪೂರ್ವಕವಾಗಿ ನೀಡುತ್ತಾನೆಂದು ಈ ಶಾಸನದಲ್ಲಿ ವಿವರಿಸಿದೆ.


ಈ ಮೇಲಿನ ಚಾರಿತ್ರಿಕ ಕುರುಹುಗಳನ್ನು ಗಮನಿಸಿದಾಗ ಕ್ರಿ.ಶ 10ನೇ ಶತಮಾನದಲ್ಲೇ ಈ ಗ್ರಾಮಕ್ಕೆ ಪುಲಗಿ(ಹುಲಗಿ) ಎಂದು ಕರೆಯಲಾಗುತ್ತಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತಿದೆ. ಇಲ್ಲಿ ಮತೊಂದು ಗಮನಿಸಬೇಕಾದ ಅಂಶವೆಂದರೆ ಈ ಗ್ರಾಮವನ್ನು ?ಪುರ? ಎಂದು ಉಲ್ಲೇಖಿಸಿರುವುದು. ಬಹುಶಃ ಆ ಕಾಲದಲ್ಲೇ ಇದು ಬಹುದೊಡ್ಡ ನಗರವಾಗಿರಬೇಕು. ಯಾಕೆಂದರೆ ನಗರಗಳಿಗೆ ಮಾತ್ರ ?ಪುರ? ಎಂದು ಕ?ಪರೆಯಲಾಗುತ್ತಿತ್ತು ಎನ್ನುವುದು ಚರಿತ್ರೆಯಿಂದ ತಿಳಿದುಬರುತ್ತದೆ. ಹೀಗಾಗಿ ಪ್ರಾಚೀನ ಕಾಲದಲ್ಲಿ ಈ ಹುಲಿಗಿ ಗ್ರಾಮವು ಬಹುದೊಡ್ಡ ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಹಿಂದೆ ಇದು ಜೈನ, ವೈಷ್ಣವ, ಶೈವ-ವೀರಶೈವ ಧರ್ಮಗಳ ಆಡಂಬೋಲವಾಗಿತ್ತು ಎನ್ನುವುದು ಇಲ್ಲಿನ ಕುರುಹುಗಳಿಂದ ಮಾಹಿತಿ ದೊರೆಯುತ್ತದೆ.



**ಮುನಿರಾಬಾದ:-**

?ಮುನಿರಾಬಾದ? ಇದೊಂದು ಮುಸ್ಲಿಂ ಸಂಪ್ರದಾಯದ ಹೆಸರು. ದೇಶದಲ್ಲಿ ಹೈದರಾಬಾದ್, ಸಿಕಂದರಾಬಾದ್, ಮುಜಾಫರ್‌ಬಾದ್, ಅಹ್ಮದಾಬಾದ, ನಿಜಾಮಾಬಾದ್ ಮುಂತಾದ ಹೆಸರುಗಳು ಮುಸ್ಲಿಂ ಸಂಪ್ರದಾಯವಾಗಿ ಕರೆಸಿಕೊಳ್ಳುತ್ತಿರುವ ಊರುಗಳನ್ನು ಗುರುತಿಸಬಹುದಾಗಿದೆ. ಅವುಗಳಲ್ಲಿ ಕೆಲ ಹೆಸರುಗಳು ಬದಲಾವಣೆಯಾಗಿದ್ದರೆ ಇನ್ನು ಕೆಲವು ಹಾಗೆಯೇ ಉಳಿದುಕೊಂಡು ಬಂದಿವೆ. ಅರೇಬಿಕ್ ಭಾಷೆಯಲ್ಲಿ ಮುನಿಬ್, ಮುನಿಮ್ ಎಂದರೆ ವ್ಯವಸ್ಥಾಪಕ, ಗುಮಾಸ್ತ, ನಿರ್ವಾಹಕ ಎಂಬ ಅರ್ಥಗಳು ಬರುತ್ತವೆ. ಮುಸ್ಲಿಂ ಸಂಪ್ರದಾಯದಲ್ಲಿ ಹೆಂಗಸರಿಗೆ ?ಮುನೀರಾ? ಎಂದು ಮತ್ತು ಗಂಡಸರಿಗೆ ?ಮುನಿರ್? ಎಂದು ಹೆಸರು ಇಡಲಾಗುತ್ತದೆ. ಹುಲಗಿ ಮತ್ತು

ಮುನಿರಾಬಾದ್ ಪ್ರದೇಶದಲ್ಲಿ ?ಮುನೀರಾ? ಎಂಬ ಮುಸ್ಲಿಂ ಸಮುದಾಯ ವಾಸವಾಗಿತ್ತೆಂದು ಹೇಳಲಾಗುತ್ತಿದೆ. ಅದಕ್ಕಾಗಿ ಈ ಗ್ರಮಾಕ್ಕೆ ?ಮುನಿರಾಬಾದ? ಎಂಬ ಗ್ರಾಮನಾಮ ಬಂದಿರಬಹುದೆಂದು ಹೇಳಲಾಗುತ್ತಿದೆ. ಒಟ್ಟಿನಲ್ಲಿ ಈ ?ಮುನಿರಾಬಾದ? ಗ್ರಾಮ ಮುಸ್ಲಿಂರ ತೆಕ್ಕೆಯಲ್ಲಿತ್ತೆಂಬುದು ತಿಳಿದುಬರುತ್ತದೆ. ಕ್ರಿ.ಶ 17-18ನೇ ಶತಮಾನದಲ್ಲಿ ಈ ಪ್ರದೇಶ ಹೈದ್ರಾಬಾದಿನ ನಿಜಾಮರ ಆಡಳಿತದಲ್ಲಿತ್ತು. ಹೀಗಾಗಿ ಈ ಗ್ರಾಮಕ್ಕೆ ತಮ್ಮ ಸಂಪ್ರದಾಯದ ಹೆಸರು ಇಟ್ಟಿರಬಹುದು. ಅದರ ಜೊತೆಗೆ ನಿಜಾಮರು ಈ ಗ್ರಾಮವನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಇಲ್ಲಿ ಮದ್ದು-ಗುಂಡುಗಳನ್ನು ಸಂಗ್ರಹಿಸಿಡುತ್ತಿದ್ದರು. ಸ್ವಾತಂತ್ರ?ಯ ಹೋರಾಟಗಾರರ ವಿರುದ್ಧದ ಹೋರಾಟದಲ್ಲಿ ಆ ಮದ್ದುಗಳನ್ನು ಬಳಸಲಾಗುತ್ತಿತ್ತು. ಈ ಗ್ರಾಮದ ಸುತ್ತಲೂ ಬೆಟ್ಟ-ಗುಡ್ಡಗಳಿಂದ ಮತ್ತು ಅತ್ತ ತುಂಗಾಭದ್ರ ನದಿ ಇರುವುದರಿಂದ ಇಲ್ಲಿ ಬಂದೂಕು, ಮದ್ದು-ಗುಂಡುಗಳನ್ನು ಸಂಗ್ರಹಿಸುವುದು ಬಹಳ ಯೋಗ್ಯವಾದ ಸ್ಥಳವಾಗಿತ್ತು. ಕಳ್ಳಕಾಕರಿಂದ ಮುಖ್ಯವಾಗಿ ಸ್ವಾತಂತ್ರ?ಯ ಹೋರಾಟಗಾರರಿಂದಲೂ ಸಹ ಆ ಮದ್ದು-ಗುಂಡುಗಳನ್ನು ರಕ್ಷಿಸಬೇಕಾಗಿತ್ತು.



ಯಾಕೆಂದರೆ ಸ್ವಾತಂತ್ರ?ಯ ಹೋರಾಟಗಾರರೂ ಸಹ ಇಂತಹ ಶಿಬಿರಗಳ ಮೇಲೆ ದಾಳಿಮಾಡಿ ಅವುಗಳನ್ನು ಕದ್ದೊಯ್ದು ತಮ್ಮ ಯುದ್ಧದಲ್ಲಿ ಬ್ರಿಟಿಷ್ ಮತ್ತು ನಿಜಾಮ ಸೈನ್ಯದ ವಿರುದ್ಧ ಬಳಸುತ್ತಿದ್ದರು. ಹೀಗಾಗಿಯೇ ಬೆಟ್ಟ-ಗುಡ್ಡಗಳ ಸಾಲಿನಲ್ಲಿ ಅವುಗಳನ್ನು ಸುರಕ್ಷಿತವಾಗಿ ಸಂಗ್ರಹಿಸಿಟ್ಟಿಕೊಂಡಿರುತ್ತಿದ್ದರು. ಅದರಂತೆ ಕುಷ್ಟಗಿ ತಾಲ್ಲೂಕಿನ ಮಾಲಗಿತ್ತಿ ಹತ್ತಿರವಿರುವ ವಾರಂಗಲ್ ಹತ್ತಿರದ ಬೆಟ್ಟದ ಸಾಲಿನಲ್ಲಿ ನಿಜಾಮರು ಮದ್ದು-ಗುಂಡುಗಳನ್ನು ತಯಾರಿಸುವುದು ಮತ್ತು ಅವುಗಳ ಸಂಗ್ರಹಣ ಕೇಂದ್ರವನ್ನಾಗಿ ಮಾಡಿಕೊಂಡಿದ್ದರೆಂದು ಮಾಹಿತಿ ಲಭ್ಯವಾಗಿತ್ತದೆ. ಹೀಗಾಗಿ ಈ ?ಮುನಿರಾಬಾದ? ಗ್ರಾಮವು ಚರಿತ್ರೆಯಲ್ಲಿ ಮುಸ್ಲಿಂ ಸಂಪ್ರದಾಯ ಹೆಸರಿನಲ್ಲಿ ಮತ್ತು ನಿಜಾಮರ ಆಡಳಿತ ಕೇಂದ್ರವಾಗಿ ಹಾಗೂ ಮದ್ದು-ಗುಂಡುಗಳ ಸಂಗ್ರಹಣ ಕೇಂದ್ರವಾಗಿ ಚರಿತ್ರೆಯಲ್ಲಿ ಬಹಳ ಮಹತ್ವ ಪಡೆದ ಗ್ರಾಮವಾಗಿತ್ತು.

### ಮಲ್ಲಾಪುರ ಮತ್ತು ಹೊಳೆನಿಂಗಾಪುರ:-

ವಾಸ್ತವದಲ್ಲಿ ತುಂಗಾಭದ್ರ ಅಣೆಕಟ್ಟನ್ನು ಮದ್ರಾಸ್ ಪ್ರಾಂತ್ಯದ ಬಳ್ಳಾರಿ ಜಿಲ್ಲೆಯ ಮಲ್ಲಾಪುರ ಮತ್ತು ಹೈದ್ರಾಬಾದ್ ಪ್ರಾಂತ್ಯದ ರಾಯಚೂರು ಜಿಲ್ಲೆಯ ಹೊಳೆನಿಂಗಾಪುರ ಎಂಬ ಗ್ರಾಮಗಳ ಎರಡು ಗುಡ್ಡಗಳ ಸಾಲಿನಲ್ಲಿ ಕಟ್ಟಲಾಗಿದೆ. ಇಂದು ಆ ಎರಡೂ ಗ್ರಾಮಗಳು ಮುಳುಗಡೆಯಾಗಿದ್ದು, ಅಲ್ಲಿನ ಜನರನ್ನು ಸ್ಥಳಾಂತರಿಸಿ ಬೇರೆ-ಬೇರೆ ಗ್ರಾಮಗಳಿಗೆ ಕಳುಹಿಸಿ ವಸತಿ ಕಲ್ಪಿಸಲಾಗಿದೆ. ಮಲ್ಲಾಪುರವನ್ನು ಗಂಗಾವತಿ ತಾಲ್ಲೂಕಿನ ಆನೆಗುಂದಿ ಹತ್ತಿರದಲ್ಲಿ ಸ್ಥಳಾಂತರಿಸಲಾಗಿದ್ದರೆ, ಹೊಳೆನಿಂಗಾಪುರ ಗ್ರಾಮವನ್ನು ಇಂದಿನ ಅಣೆಕಟ್ಟಿನ ಮುಂಭಾಗದಲ್ಲಿನ ನದಿಯ ದಡದಲ್ಲಿ ಸ್ಥಳಾಂತರಿಸಲಾಗಿದೆ. ಈ ಹೊಳೆನಿಂಗಾಪುರದಿಂದಲೂ ಕೆಲ ಜನರು ಸ್ಥಳಾಂತರಗೊಂಡು ರಾಷ್ಟ್ರೀಯ ಹೆದ್ದಾರಿ ಮುಖ್ಯರಸ್ತೆಯಲ್ಲಿ ವಾಸಿಸುತ್ತಿದ್ದು ಅದಕ್ಕೆ ಹೊಸನಿಂಗಾಪುರ ಎಂದು ಕರೆಯಲಾಗುತ್ತಿದೆ. ಪ್ರಾಚೀನ ಕಾಲದಲ್ಲಿ ಮಲ್ಲಾಪುರ ಮತ್ತು ಹೊಳೆನಿಂಗಾಪುರ ಗ್ರಾಮಗಳು ಐತಿಹಾಸಿಕ ಗ್ರಾಮಗಳಾಗಿದ್ದವು. ಹೊಳೆನಿಂಗಾಪುರ ಜೈನ ಸಂಪ್ರಾದಾಯದ ಕೇಂದ್ರವಾಗಿತ್ತು. ಆದರೆ ಇಂದು ಎರಡೂ ಗ್ರಾಮಗಳು ಸಂಪೂರ್ಣ ಮುಳುಗಡೆಯಾಗಿದ್ದರಿಂದ ಅಲ್ಲಿ ಯಾವುದೇ ಸ್ಮಾರಕಗಳು ಅಥವಾ ಅವಶೇಷಗಳು ಕಂಡುಬರುವುದಿಲ್ಲ.

### ತುಂಗಾಭದ್ರ ಅಣೆಕಟ್ಟು ನಿರ್ಮಾಣ:-

ಕ್ರಿ.ಶ 18 ಮತ್ತು 19ನೇ ಶತಮಾನದಲ್ಲಿ ಈ ಪ್ರದೇಶವನ್ನು ನಿಜಾಮರು ಮತ್ತು ಬ್ರಿಟಿಷ್ ಇಬ್ಬರೂ ಪರಸ್ಪರ ಹಂಚಿಕೆಯ ಆಧಾರದ ಮೇಲೆ ಆಡಳಿತ ಮಾಡುತ್ತಿದ್ದರು. ಒಂದರ್ಥದಲ್ಲಿ ದ್ವಿ-ಸರಕಾರ ಪದ್ಧತಿಯಂತಿದ್ದರೂ ಇಲ್ಲಿ ಹೇಳಿಕೊಳ್ಳುವಷ್ಟು ಅಭಿವೃದ್ಧಿ ಕಂಡುಬರುವುದಿಲ್ಲ. ಈ ಮೊದಲೇ ಹೆಚ್ಚಿನ ಪ್ರಮಾಣದಲ್ಲಿದ್ದ ಮಳೆಯು ಕಡಿಮೆಯಾಯಿತು. ನಂತರ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಅಲ್ಲಲ್ಲಿ ಬರಗಾಲ ಉಂಟಾಗುತ್ತದೆ. ನೀರಿನ ಮೂಲಗಳು ಕಡಿಮೆಯಾಯಿತು. ಬ್ರಿಟಿಷ್ ಇಸ್ಟ್‌ಇಂಡಿಯಾ ಕಂಪನಿಯ ಥಾಮಸ್ ಮನ್ರೋ ಅನಂತಪುರ ಜಿಲ್ಲೆಯನ್ನು ಒಡೆದು ಅದರ ಭಾಗವಾದ ಬಳ್ಳಾರಿ ಜಿಲ್ಲೆಯನ್ನು ಹೈದ್ರಾಬಾದ ನಿಜಾಮನಿಂದ ಕಿತ್ತುಕೊಂಡು ತಮ್ಮ ಅಧೀನದಲ್ಲಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಂಡನು. ಕ್ರಿ.ಶ 1882ರಲ್ಲಿ ಹಂಡೆ ಪಾಳೆಗಾರರ ಆಡಳಿತ ಕೊನೆಗೊಂಡಿತು. ರೈತವಾರಿ ಭೂಕಂದಾಯ ಪದ್ಧತಿ ಜಾರಿಗೆ ತಂದನು. 1876ರಲ್ಲಿ ಬೀಕರ ಬರಗಾಲ ಉಂಟಾಯಿತು. ಬಳ್ಳಾರಿ, ರಾಯಚೂರು ಪ್ರದೇಶ ಮಳೆಯಾಧಾರಿತವಾಗಿ ನಾಡು ಸಮೃದ್ಧವಾಗಿತ್ತು. ಮಳೆಯ ಪ್ರಮಾಣದಲ್ಲಿ ಏರಿಳಿತ ಉಂಟಾಗಿ ಬರಗಾಲ ಹೆಚ್ಚಾಗುತ್ತಾ ಹೋಯಿತು. ಮನೆಯಲ್ಲಿ ಆಹಾರ ಧಾನ್ಯಗಳ ಕೊರತೆಯುಂಟಾಯಿತು. ಅಂಗಡಿಯಲ್ಲಿಯೂ ಸಹ ಧಾನ್ಯಗಳ ಕೊರತೆಯುಂಟಾಗಿ ದನ-ಕರುಗಳಿಗೂ ನೀರಿಲ್ಲದ ಸ್ಥಿತಿ ನಿರ್ಮಾಣವಾಯಿತು. ಒಂದು ಅಂದಾಜಿನ ಪ್ರಕಾರ ಐವತ್ತು ಲಕ್ಷಕ್ಕೂ ಅಧಿಕ ಜನ ಬಲಿಯಾದರು ಎಂದು ಹೇಳಲಾಗುತ್ತಿದೆ. ಸತ್ತ ಹೆಣಗಳನ್ನು ಶವಸಂಸ್ಕಾರ ಮಾಡಲಾಗದ ಸ್ಥಿತಿ ಉಂಟಾಯಿತು. ಇದರಿಂದಾಗಿ ಕಾಲರ, ಪ್ಲೇಗ್‌ದಂತಹ ಮಾರಕ ರೋಗಗಳು ಉಲ್ಭಣಗೊಂಡವು. ಸತ್ತ ಹೆಣಗಳನ್ನು ನಾಯಿ ನರಿಗಳು ತಿಂದುಹೋದವು. ಬ್ರಿಟಿಷ್ ಸರಕಾರ ಇಲ್ಲಿನ ಜನರ ಬವಣೆ ನೀಗಿಸಿ ಬದುಕನ್ನು ಹಸನಾಗಿಸಬೇಕು, ನೆಲ ಹಸಿರಾಗಿಸಬೇಕು ಎಂಬ ಆಲೋಚನೆಯೊಂದಿಗೆ ಹಲವು ಯೋಜನೆಗಳನ್ನು ರೂಪಿಸಿದರು. ಬರಕ್ಕೆ ಖರ್ಚು ಮಾಡುವ ಹಣದಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಶಾಶ್ವತ ಕಾಲುವೆ ನಿರ್ಮಿಸಿ ಪರಿಹಾರ ಮಾಡಬೇಕೆಂದು ಆಲೋಚಿಸಿದರು. ಹಾಗಾಗಿ ಬ್ರಿಟಿಷ್ ಸರಕಾರಗಳು ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಜನರಿಗೆ ಅನುಕೂಲ ಮಾಡಬೇಕೆಂಬ ಯೋಜನೆಗಳನ್ನು ರೂಪಿಸುವ ಕಾರ್ಯದಲ್ಲಿ ತೊಡಗಿದರು.

ಅದರಂತೆ 1902ರಲ್ಲಿ ಮದ್ರಾಸ್ ಸರಕಾರದ ಮುಖ್ಯ ಎಂಜಿನಿಯರ್ ಆಗಿದ್ದ ಕರ್ನಲ್ ಸ್ಮಾರ್ಟ್ ತುಂಗಾಭದ್ರಾ ಅಣೆಕಟ್ಟಿನ ನಿರ್ಮಾಣಕ್ಕಾಗಿ ವಿವರವಾದ ವರದಿಯನ್ನು ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸಿದರು. ನಂತರ ಬಂದ ಮೆಕೆಂಜಿಯವರು ಮಲ್ಲಾಪುರ ಮತ್ತು ಹೊಳೆನಿಂಗಾಪುರ ಗ್ರಾಮಗಳ ಎರಡು ಗುಡ್ಡಗಳ ನಡುವೆ ಅಣೆಕಟ್ಟನ್ನು ಕಟ್ಟಬಹುದೆಂದು ಸಲಹೆ ನೀಡಿದರು. ಆಗ ಹೈದರಾಬಾದಿನ ನಿಜಾಮನು ನದಿಯ ಮೇಲೆ ನಮಗೂ ಹಕ್ಕಿದೆ ಎಂದು ಹಕ್ಕೊತ್ತಾಯ ಮಾಡಿದರು. ಇದಲ್ಲದೇ ಮುಂಬೈ ಪ್ರಾಂತ್ಯ, ಮೈಸೂರು ಪ್ರಾಂತ್ಯ ಮತ್ತು ಮದ್ರಾಸ ಪ್ರಾಂತ್ಯಗಳೂ ಸಹ ತಮ್ಮ-ತಮ್ಮ ಹಿತಾಸಕ್ತಿಗನುಗುಣವಾಗಿ ಅಣೆಕಟ್ಟು ನಿರ್ಮಿಸುವ ಪ್ರಸ್ತಾವನೆಯನ್ನು ಸಲ್ಲಿಸಿದ್ದರಿಂದ ಯೋಜನೆ ನೆನಗುದಿಗೆ ಬಿದ್ದಿತು. ಮದ್ರಾಸ್ ಪ್ರಾಂತ್ಯವು ಆಗಿನ ಮುಖ್ಯ ಇಂಜಿನಿಯರ್ ತಿರುಮಲೆ ಅಯ್ಯರ್‌ರವರಿಗೆ ಒಂದು ವಸ್ತುನಿಷ್ಠ ಯೋಜನೆ ತಯಾರಿಸಲು ನೇಮಿಸಲಾಯಿತು. ಹೈದರಾಬಾದಿನ ನಿಜಾಮರೂ ಸಹ ಸಿ.ಸಿ.ದಲಾಲ್ ಎಂಬ ಎಂಜಿನಿಯರ್‌ಗೆ ಒಂದು ಪ್ರತ್ಯೇಕ ವರದಿ ತಯಾರಿಸಲು ನೇಮಿಸಿದರು. ಈ ಎರಡೂ ವರದಿಗಳನ್ನು ಪರಿಶೀಲಿಸಿದ ಮದ್ರಾಸ ಪ್ರಾಂತ್ಯದ ಸರಕಾರ 1942ರಲ್ಲಿ ತಿರುಮಲೆ ಅಯ್ಯರ್ ವರದಿಯನ್ನೇ ಅಂತಿಮಗೊಳಿಸಿ ಅನುಮೋದನೆ ನೀಡಿತು. ಸುಮಾರು ನಲವತ್ತೈದು ವರ್ಷಗಳ ಸುದೀರ್ಘ ಚರ್ಚೆ, ವಾದ, ವಿವಾದಗಳ ನಂತರ 1945ರ ಫೆಬ್ರುವರಿ 28ರಂದು ಮದ್ರಾಸ್ ಪ್ರಾಂತೀಯ ಗೌವರ್ನರ್ ಆಗಿದ್ದ ಸರ್ ಅರ್ಥರ್ ಹೋಪ್ ಅಡಿಗಲ್ಲು ಹಾಕಿ ಯೋಜನೆಯನ್ನು ಪ್ರಾರಂಭಿಸಿದರು. ಅದರಂತೆ ಮುನಿರಾಬಾದ ಗ್ರಾಮದ ಹತ್ತಿರವಿರುವ ಬೆಟ್ಟಗಳ ಸಾಲಿನಲ್ಲಿ ಒಂದು ಅಣೆಕಟ್ಟು ಕಟ್ಟಲು ಪ್ರಾರಂಭಿಸಿದರು. ಆಗ ದೇಶಕ್ಕೆ ಸ್ವಾತಂತ್ರ?ಯ ಬಂದ ಕಾರಣ ಮತ್ತು ಹಣದ ಹಂಚಿಕೆ ಹಾಗೂ ಕೊರತೆಯ ಕಾರಣದಿಂದ ಯೋಜನೆ ಕುಂಟುತ್ತಾ ಸಾಗಿತು. ಒಟ್ಟಿನಲ್ಲಿ ಆಂಧ್ರಪ್ರದೇಶ ಮತ್ತು ಕರ್ನಾಟಕ ಎರಡೂ ರಾಜ್ಯಗಳ ಹಣದ ಹಂಚಿಕೆಯ ಮೇಲೆ ಅಣೆಕಟ್ಟಿನ ನಿರ್ಮಾಣದ ಕಾರ್ಯ ಸಾಗಿತು. ಈ ಅಣೆಕಟ್ಟು ಕಟ್ಟಲು ಮದ್ರಾಸ ಪ್ರಾಂತದ ಇಂಜಿನಿಯರಿಗಳೇ ಹೆಚ್ಚಿದ್ದರು. ಮುಖ್ಯವಾಗಿ ಈ ಯೋಜನೆ ಪೂರ್ಣಗೊಳಿಸಲು ತಿರುಮಲೆ ಅಚು?ಯರ್‌ಗೆ ಜವಾಬ್ದಾರಿ ನೀಡಲಾಗಿತ್ತು. ಇದರ ಜೊತೆಗೆ ಈ ಅಣೆಕಟ್ಟು ನಿರ್ಮಾರ್ಣಕ್ಕೆ ಆಂಧ್ರಪ್ರದೇಶ ಮತ್ತು ಮುಖ್ಯವಾಗಿ ತಮಿಳುನಾಡು ರಾಜ್ಯಗಳಿಂದ ಕಾರ್ಮಿಕರನ್ನು ಕರೆಸಲಾಗಿತ್ತು. ಜೊತೆಗೆ ತಂತ್ರಜ್ಞರು, ಇಂಜಿನೀರ?ಗ್ಗಳನ್ನು ಕರೆಸಲಾಗಿತ್ತು. ಒಟ್ಟಾರೆ ಅಡೆ-ತಡೆಗಳು ಮತ್ತು ವಾದ-ವಿವಾದಗಳ ನಡುವೆಯೇ ಅಣೆಕಟ್ಟು ಪೂರ್ಣಗೊಂಡು 1953ರ ಜುಲೈ 1ರಂದು ಪ್ರಪ್ರಥಮವಾಗಿ ಕಾಲುವೆಗೆ ನೀರು ಹರಿಸಲಾಯಿತು.

### ರೇಲ್ವೆ ನಿಲ್ದಾಣ ಸ್ಥಾಪನೆ:-

ಬ್ರಿಟಿಷ್ ಅವಧಿಯಲ್ಲಿ ಮುಂಬೈ ಪ್ರಾಂತ್ಯದ ಬಳ್ಳಾರಿ ಮತ್ತು ಮದ್ರಾಸ್ ಪ್ರಾಂತ್ಯದ ಗದಗದವರೆಗೆ ಮಾತ್ರ ರೈಲು ಸಂಪರ್ಕವಿತ್ತು. ಗದಗದಿಂದ ಬಳ್ಳಾರಿಗೆ ಸಂಪರ್ಕಿಸುವ ರೈಲಿನ ಯಾವುದೇ ವ್ಯವಸ್ಥೆ ಇರಲಿಲ್ಲ. ಆಗ ಮುಖ್ಯವಾಗಿ ಸರಕು ಸಾಗಾಣ ಕೆಯು ತುಂಬಾ ತೊಂದರೆಯಾಯಿತು. ಮುಂಬೈ ಪ್ರಾಂತ್ಯದಿಂದ ಮದ್ರಾಸ್ ಪ್ರಾಂತ್ಯಕ್ಕೆ ಮತ್ತು ಮದ್ರಾಸ್ ಪ್ರಾಂತ್ಯದಿಂದ ಮುಂಬೈ ಪ್ರಾಂತ್ಯಕ್ಕೆ ಸರಕು ಸಾಗಾಣ ಕೆಯ ವ್ಯವಸ್ಥೆ ಅಗತ್ಯವಾಗಿತ್ತು. ಹೀಗಾಗಿ ಗದಗ ಮತ್ತು ಬಳ್ಳಾರಿಯ ಮಧ್ಯೆ ರೈಲು ಸಂಪರ್ಕ ಕಲ್ಪಿಸಿ ಮದ್ರಾಸ್ ಮತ್ತು ಮುಂಬೈ ಪ್ರಾಂತ್ಯ ಎರಡನ್ನೂ ಕಲ್ಪಿಸುವ ಅವಶ್ಯಕತೆ ತೀರಾ ಇತ್ತು. ಹೈದರಾಬಾದಿನ ನಿಜಾಮನು ಕೊಪ್ಪಳ ವಿಭಾಗವನ್ನು ?ಸಾಲರಜಂಗ ಬಹದ್ದೂರ? ಎಂಬ ಬಿರುದಾಂಕಿತ ಮೀರ ತುರಾಬ ಅಲೀಖಾನ ಬಹದ್ದೂರ(1829-1883) ಇವನಿಗೆ ಕೊಪ್ಪಳದ ಜಾಹಗೀರ್ ಆಗಿ ನೇಮಿಸಿದ್ದನು. ಇವನನ್ನು ಒಂದನೇ ಸಾಲರಜಂಗ್ ಬಹದ್ದೂರು ಎಂತಲೂ ಕರೆಯಲಾಗುತ್ತದೆ. ಇವನ ತರುವಾಯ ಇವನ ಹಿರಿಯ ಮಗ ನವಾಬ ಮೀರಲಾಯಕ ಅಲೀಖಾನನು(1862ರಲ್ಲಿ ಜನನ) ಕೊಪ್ಪಳ ಜಾಹಗೀರ್ ಆಗಿ ನೇಮಕವಾದನು. ಇವನನ್ನು 2ನೇ ಸಾಲರ್‌ಜಂಗ್ ಎಂದು ಕರೆಯಲಾತ್ತಿತ್ತು. ಗದಗ ಮತ್ತು ಬಳ್ಳಾರಿಯ ಮಧ್ಯೆ ರೈಲು ಮಾರ್ಗ ಸಂಪರ್ಕದ ಕೆಲಸದಲ್ಲಿ ಹೈದರಾಬಾದಿನ ನಿಜಾಮರ ಮತ್ತು ಸಾಲರಜಂಗ್‌ನ ಅವಶ್ಯಕತೆ ಬಹಳ ಇತ್ತು. ಹೀಗಾಗಿ ಬ್ರಿಟಿಷ್ ಸರಕಾರ ಕೊಪ್ಪಳ ಜಾಹಗೀರ ಅಧಿಕಾರಿ ಸಾಲರಜಂಗ್‌ನ ಸಹಾಯ ಬೇಡಿದರು. ಸಾಲರ ಜಂಗನಿಗೂ ಸರಕು ಸಾಕಾಣ ಕೆಯ ಅವಶ್ಯಕತೆಗಾಗಿ ರೈಲಿನ ಸಂಪರ್ಕ ಬೇಕಾಗಿತ್ತು. ಜೊತೆಗೆ ಅವರ ಮಿಲ್‌ಗಳಿಗೆ ಸರಕುಗಳು ಮತ್ತು ತಯಾರಿಸಿದ ವಸ್ತುಗಳ ಸಾಕಾಣ ಕೆಗಾಗಿ ಅದು ಅಗತ್ಯವಾಗಿ ಬೇಕಾಗಿತ್ತು. ಮುಖ್ಯವಾಗಿ ಹುಲಗಿ ಸುತ್ತಲಿನಲ್ಲಿದ್ದ ತಮ್ಮ ಕಂಪನಿಗಳಿಗೆ ಸಂಪರ್ಕದ ಅವಶ್ಯಕತೆಗಾಗಿ ಹುಲಗಿಯಲ್ಲಿ ನಿಲ್ದಾಣದ ವ್ಯವಸ್ಥೆ ಮಾಡಿದನು. 2ನೇ ಸಾಲರಜಂಗ್‌ನ ಅವಧಿಯಲ್ಲಿ ಕೊಪ್ಪಳ ತಾಲ್ಲೂಕು ಅಧಿಕಾರಿಯಾಗಿ ನರಸಿಂಗರಾಯರು ಕಾರ್ಯನಿರ್ವಹಿಸುತ್ತಿದ್ದರು. ಈ ನರಸಿಂಗರಾಯರ ಅವಧಿಯಲ್ಲೇ ಕೊಪ್ಪಳದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳಾಗಿವೆ. ಕೊಪ್ಪಳದ ನಕಾಶೆಯನ್ನು ಮೊದಲಿಗೆ ತಯಾರಿಸಿ ಅದಕ್ಕೆ ಒಂದು ರೂಪ ಕೊಟ್ಟು ನಗರವನ್ನಾಗಿಸಿದನು. ಪಾಠಶಾಲೆ, ಧರ್ಮಶಾಲೆಗಳನ್ನು ಕಟ್ಟಿದನು. ಅನೇಕ ಮಸೀದಿ, ಮಂದಿರಗಳನ್ನು ನಿರ್ಮಿಸಿದನು. ಊರಿನ ಸುತ್ತಲೂ ನಾಲ್ಕು ಅಗಸಿಗಳನ್ನು ನಿರ್ಮಿಸಿ ಈ ನಗರಕ್ಕೆ ರಕ್ಷಾಕವಚ ನಿರ್ಮಿಸಿದನು. ಕೊಪ್ಪಳ ಜನತೆಗೆ ಕುಡಿಯುವ ನೀರಿಗಾಗಿ ಹುಲಿಕೆರೆಯನ್ನು ಕಟ್ಟಿ ಮನೆ-ಮನೆಗೆ ನೀರು ಸರಬರಾಜಿನ ವ್ಯವಸ್ಥೆ ಕಲ್ಪಿಸಿದನು. ಇಂತಹ ಕ್ರಿಯಾಶೀಲ ವ್ಯಕ್ತಿಯ ಅವಧಿಯಲ್ಲೇ (ಸುಮಾರು 1860ರಿಂದ 1870) ಗದಗದಿಂದ ಬಳ್ಳಾರಿಗೆ ರೈಲು ಸಂಪರ್ಕ ಕಲ್ಪಿಸುವ ಮಾರ್ಗ ನಿರ್ಮಿಸಿದನು. ಇದೇ ಸಂದರ್ಭದಲ್ಲೇ ಪುರಾತನ ಕಾಲಕ್ಕೆ ಇದ್ದ ?ಹುಲಿಗಿ? ಎಂಬ ಗ್ರಾಮ ನಾಮವನ್ನು ಬದಲಿಸಿ ಮುನಿರಾಬಾದ, ಮುನಿರಾಬಾದ್ ಆರ್. ಎಸ್(ಮುನಿರಾಬಾದ ರೇಲ್ವೇ ಸ್ಟೇಷನ್) ಎಂಬ ಹೆಸರಿನಿಂದ ರೇಲ್ವೆ ನಿಲ್ದಾಣವನ್ನು ನಿರ್ಮಿಸಿಲಾಯಿತು. ಅಂದಿನಿಂದ ಮೂಲದಲ್ಲಿದ್ದ ?ಹುಲಿಗಿ? ಗ್ರಾಮವು ?ಮುನಿರಬಾದ್? ಮತ್ತು ?ಮುನಿರಾಬಾದ್.ಆರ್.ಎಸ್? ಆಗಿ ಹೆಸರು ಬದಲಾವಣೆಯಾಯಿತು. ಅಣೆಕಟ್ಟು ಕಟ್ಟಿ ಪೂರ್ಣಗೊಂಡು, ಬ್ರಿಟಿಷರು ಮರಳಿ ಹೋಗಿ, ನಿಜಾಮರ ಆಡಳಿತ ಕೊನೆಗೊಂಡು ಸುಮಾರು ಎಂಬತ್ತು ವರ್ಷಗಳೇ ಗತಿಸಿಹೋಗಿವೆ. ಮುನಿರಾಬಾದನಿಂದ ಹುಲಿಗಿ ಪ್ರತ್ಯೇಕವಾಗಿ ಎಷ್ಟೋ ವರ್ಷಗಳು ಕಳೆದುಹೋಗಿವೆ. ಆದರೆ ಇಂದಿಗೂ ರೇಲ್ವೆ ನಿಲ್ದಾಣ, ಅಂಚೆ ಕಚೇರಿಗಳಲ್ಲಿ ಮುನಿರಾಬಾದ್ ಎಂಬ ಹೆಸರು ರಾರಾಜಿಸುತ್ತಿದೆ. ಇಂದು ಹುಲಿಗೆ ಗ್ರಾಮಕ್ಕೆ ಸ್ವತಂತ್ರ?ಯ ಐಡೆಂಟಿಟಿ ಕೊಡದಿರುವುದು ಒಂದು ಖೇಧದ ಸಂಗತಿಯೇ ಆಗಿದೆ.

ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್
ಕನ್ನಡ ಉಪನ್ಯಾಸಕರು
ಕನಸು ನಿಲಯ ಮಹಾಂತಯ್ಯನಮಠ ಶಾಲೆ ಎದುರಿಗೆ
ಬಿ.ಟಿ. ಪಾಟೀಲ ನಗರ, ಕೊಪ್ಪಳ-583231
ಮೊ.ಸಂ: 9448570340

# ಗಣಿ ಮಾಫಿಯಾದ ಜೊತೆ ಸೇರಿಕೊಂಡ ಕೊಪ್ಪಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ!!

ಕಾನೂನುಗಳನ್ನು ಮೀರಿ ಕಲ್ಲು ಕ್ವಾರಿ ಹಾಗೂ ಕ್ರಷರ್ ಗಳು ಕೆಲಸ ಮಾಡುತ್ತಿದ್ದರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಮಾತ್ರ ಕಚೇರಿಗೆ ಸೀಮಿತವಾಗಿದ್ದಾರೆ. ಪರಿಣಾಮ ಅಮಾಯಕ ಕಾರ್ಮಿಕರು ಪ್ರಾಣ ಕಳೆದುಕೊಳ್ಳುವ ಮುಂದುವರಿದಿದೆ. ಎಷ್ಟೋ ಜನರ ಪ್ರಾಣ ಹೋದರೂ ಕೂಡ ಅವುಗಳು ಹೊರಗಡೆ ಬರದಂತೆ ರಾಜಿ ಮಾಡಿಕೊಳ್ಳುತ್ತಿದ್ದಾರೆ ಕ್ವಾರಿ ಮತ್ತು ಕ್ರಷರ್ ಮಾಲೀಕರು. ಕೊಪ್ಪಳದ ಆಸುಪಾಸಿನಲ್ಲಿ ಇರುವ ಕಲ್ಲುಕಾರಿಗಳಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿ ಸಾಕಷ್ಟು ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ, ಆದರೂ ಗಣಿ ಸುರಕ್ಷತೆಗೆ ಕಟ್ಟುನಿಟ್ಟಿನ ನಿಯಮಗಳ ಜಾರಿಗೆ ಅಧಿಕಾರಿಗಳು ಮುಂದಾಗಿಲ್ಲದ ಕಾರಣ ವ್ಯಾಪಕ ಭ್ರಷ್ಟಾಚಾರಕ್ಕೆ ಕಾರಣವಾಗಿದೆ ಗಣಿ ಇಲಾಖೆಯ ಅಧಿಕಾರಿಗಳ ಮೌನದಿಂದ, ಪರವಾನಿಗೆ ನವೀಕರಣ ಸಂದರ್ಭದಲ್ಲಿ ಚುರುಕಿನಿಂದ ಕೆಲಸ ಮಾಡುವ ಇಲಾಖೆ ಸಿಬ್ಬಂದಿಗಳು ನಂತರದಲ್ಲಿ ಕಚೇರಿಗಳಿಗೆ ಸೀಮಿತರಾಗುತ್ತಿದ್ದಾರೆ, ಸಾರ್ವಜನಿಕರಿಂದ ದೂರುಗಳು ಬಂದರೂ ಕಾಟಾಚಾರಕ್ಕೆ ಸ್ಥಳ ಪರಿಶೀಲಿಸಿ ಸುಮ್ಮನಾಗುತ್ತಿದ್ದಾರೆ ಮತ್ತು ಕ್ವಾರಿ ಮತ್ತು ಕ್ರಷರ್ ಮಾಲೀಕರೊಂದಿಗೆ ಶಾಮೀಲಾಗಿ ಈ ರೀತಿ ಮಾಡಿ ಈ ದೂರು ಸರಿ ಹೋಗುತ್ತದೆ ಎಂದು ಸ್ವತಃ ಅಧಿಕಾರಿಗಳೇ ಹೇಳಿ ಕೊಡುತ್ತಿದ್ದಾರೆ, ಅಧಿಕಾರಿಗಳು ಹೇಳಿದಂತೆ ಕ್ರಷರ್ ಮತ್ತು ಕ್ವಾರಿ ಮಾಲೀಕರು ಹಳ್ಳಿ ಯವರನ್ನು ಉಪಯೋಗ ಮಾಡಿಕೊಂಡು ದೂರು ಕೊಟ್ಟವರ ಮೇಲೆ ಪ್ರಹಾರ ಮಾಡುವಂತೆ ಮಾಡುತ್ತಿದ್ದಾರೆ,

**ಮುಲಾಜಿಗೆ ಮನ್ನಣೆ:**
ನಿಯಮಿತವಾಗಿ ಕ್ವಾರಿಕ್ರಶರ್ ಗಳಿಗೆ ಭೇಟಿ ನೀಡಿ ನಿಯಮ ಪಾಲನೆಗಳ ಬಗ್ಗೆ ಅಧಿಕಾರಿಗಳು ಕಾತರಿಪಡಿಸಿಕೊಳ್ಳಬೇಕು, ಉಲ್ಲಂಘನೆ ಪ್ರಕರಣಗಳಲ್ಲಿ ನೋಟಿಸ್ ಜಾರಿಗೂ ಅಧಿಕಾರವಿದೆ ಆದರೂ ಕಲ್ಲುಕ್ವಾರಿ ಕ್ರಶರ್ ಮಾಲೀಕರ ಒತ್ತಡ ಹಾಗೂ ಮರ್ಜಿಗೆ ಒಳಗಾಗಿ ದೂರುಗಳು ಬಂದರು ಗಂಭೀರವಾಗಿ ಪರಿಗಣಿಸುತ್ತಿಲ್ಲ ಗಣಿ ಮತ್ತು ಭೂ ವಿಜ್ಞಾನ ಇಲಾಖೆ.

***ನಿಯಮ ಮೀರಿ ಜಿಲೇಟಿನ್ ಬಳಕೆ:**

ಕ್ವಾರಿ ಗಳಲ್ಲಿ ದೊಡ್ಡ ಬಂಡೆಗಳನ್ನು ಒಡೆಯಲು ಜಿಲೆಟಿನ್ ಬಳಸಲು ಅವಕಾಶವಿದೆ, ಆದರೆ ಸ್ಫೋಟಕಗಳನ್ನು ಬಳಸಲು ಕೇಂದ್ರ ಗಣಿ ಸುರಕ್ಷತೆಯ ಪ್ರಧಾನ ನಿರ್ದೇಶಕರಿಂದ ಅನುಮತಿ ಪಡೆಯಬೇಕು ಸ್ಫೋಟಕದ ಲೈಸೆನ್ಸ್ ಹೊಂದಿರುವ ವ್ಯಕ್ತಿಯ ಮಾರ್ಗದರ್ಶನದಲ್ಲಿ ಸ್ಫೋಟಿಸುವದು ಕಡ್ಡಾಯವಾಗಿದೆ, ಆದರೆ ಬಹುತೇಕ ಕ್ವಾರಿಗಳಲ್ಲಿ ಉತ್ತರ ಭಾರತದ ಕಾರ್ಮಿಕರೇ ಜಿಲೆಟಿನ್ ಗಳನ್ನು ಅಳವಡಿಕೆ ಮಾಡಿ ಸ್ಫೋಟಿಸುತ್ತಿದ್ದಾರೆ, ಹೆಚ್ಚಿನ ಬಂಡೆಗಳನ್ನು ಹೊಡೆಯಬೇಕೆಂಬ ದುರಾಸೆಯಿಂದ ನಿಯಮ ಮೀರಿದ ಕೆಲಸ ಮಾಡಲಾಗುತ್ತಿದೆ ಇದು ಕಾರ್ಮಿಕರ ಜೀವಕ್ಕೆ ಆಪತ್ತು ತರುತ್ತಿದೆ. ಕೊಪ್ಪಳ ತಾಲೂಕಿನ ಸುಲ್ತಾನಪುರ ವ್ಯಾಪ್ತಿಯಲ್ಲಿ ಬರುವ ಕಲ್ಲು ಕ್ರಶರ್ ಕ್ವಾರಿಗಳಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸಿವೆ, ಆದರೆ ಅವು ಹೊರಗಡೆ ಬರುವುದಿಲ್ಲ ಮಾಲೀಕರ ಮರ್ಜಿಗೆ ಒಳಗಾಗಿ ಸ್ಥಳೀಯರಿಂದಲೇ ರಾಜಿ ಮಾಡಲ್ಪಡುತ್ತಿವೆ ಇಂತಹ ಪ್ರಕರಣಗಳು,

**ಕಲ್ಲು ಕ್ರಷರ್ ಕ್ವಾವಾರಿಗಳಲ್ಲಿ ನಡೆಯುವ ಸಾವುನೋವಿನ ಪ್ರಕರಣಗಳು ಬಯಲಿಗೆ ಬರುವುದಿಲ್ಲ:**
ಸಾಕಷ್ಟು ಸಾವು ನೋವಿನ ಪ್ರಕರಣಗಳು ನಡೆದರೂ ಕೂಡ ದಾಖಲಾಗುವುದೇ ಇಲ್ಲ, ಇದಕ್ಕೆ ಸ್ಥಳೀಯ ಜನಪ್ರತಿನಿಧಿಗಳು ಮತ್ತು ಕ್ರಷರ್ ಮಾಲೀಕರ ಪ್ರಭಾವ ಕಾರಣ ಅನ್ನೆಬಹುದು, ಸ್ಥಳೀಯ ಒಂದಿಷ್ಟು ಮುಖಂಡರನ್ನು ಕರೆಸಿ ಅನ್ಯಾಯದ ರಾಜಿ ಮಾಡಿಸಿ ಪ್ರಕರಣಗಳನ್ನು ಮುಚ್ಚಿ ಹಾಕುವಲ್ಲಿ ಕ್ರಷರ್ ಮತ್ತು ಕ್ವಾರಿ ಮಾಲೀಕರು ಯಶಸ್ವಿಯಾಗುತ್ತಿದ್ದಾರೆ, ಆದರೆ ಪೋಲಿಸ್ ಇಲಾಖೆಯಲ್ಲಿ ಪ್ರಕರಣಗಳು ದಾಖಲಾಗದೆ ಸಾವು ನೋವಿನ ಅಂಕಿ ಅಂಶಗಳು ತಿಳಿಯುತ್ತಿಲ್ಲ ಇದು ಒಂದು ರೀತಿಯ ಗಣಿ ಮಾಫಿಯಾ ಅಂತಲೇ ಹೇಳಬಹುದು.

**ದೂರು ನೀಡಿದ ಪತ್ರಕರ್ತ ಗೋವಿಂದರಾಜ ಬೂದಗುಂಪ ಮೇಲೆ ಹಲ್ಲೇ ಪ್ರಯತ್ನ:**

ಗಣಿ ಮಾಲೀಕರು ನಿಯಮ ಉಲ್ಲಂಘಿಸಿ ಗಣಿ ಮಾಫಿಯ ಮಾಡುತ್ತಿರುವ ಅದರ ವಿರುದ್ಧ ಸಾಕಷ್ಟು ಬಾರಿ ಗೋವಿಂದರಾಜ್ ಬೂದಗುಂಪ ಅನ್ನುವ ಪತ್ರಕರ್ತರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ದೂರು ನೀಡಿದ್ದಾರೆ ಇದೆರ ಬೆನ್ನಲ್ಲೇ ಸ್ಥಳೀಯರಿಂದ





ಅವರಿಗೆ ಬೆದರಿಕೆ ಒಡ್ಡಲಾಗುತ್ತಿದೆ, ಜನಸಂದಣಿ ಮತ್ತು ಸಾಕುಪ್ರಾಣಿಗಳು ಓಡಾಡುವ ಪ್ರದೇಶದಲ್ಲಿ ಕಲ್ಲು ಕ್ವಾರಿಗಳಿಗೆ ಕೊಪ್ಪಳದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಣ್ಣು ಮುಚ್ಚಿ ಪರವಾನಿಗೆ ನೀಡಿದೆ, ಇದರಿಂದ ರೈತಾಪಿ ವರ್ಗದ ಜನರು ಆ ಭಾಗದಲ್ಲಿ ಜೀವವನ್ನು ಕೈಯಲ್ಲಿ ಇಟ್ಟುಕೊಂಡು ತಿರುಗುವಂತಾಗಿದೆ, ಇದರ ಬಗ್ಗೆ ಪ್ರಶ್ನೆ ಮಾಡಿದರೆ ಕೆಲವೊಂದಿಷ್ಟು ಗಣಿ ಮಾಲೀಕರ ಬಾಡಿಗೆ ಗುಂಡಾಗಳು ಪ್ರಶ್ನೆ ಮಾಡಿದವರ ಮೇಲೆ ಹಲ್ಲೇ ಮಾಡುತ್ತಾರೆ, ಈ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತರು ಲೋಕಾಯುಕ್ತಕ್ಕೆ ನೇರವಾಗಿ ದೂರು ಸಲ್ಲಿಸಲು ಮುಂದಾಗಿದ್ದಾರೆ.